MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com Yuva Marga yuva_marga_

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 110 | ಭಾನುವಾರ : 15-02-2026 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 110 | SUNDAY : 15-02-2026 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ತಾಲೂಕು ಆಡಳಿತದಿಂದ ವಿವಿಧ ಜಯಂತಿಗಳ ಪೂರ್ವ ಭಾವಿ ಸಭೆ



ಯುವಮಾರ್ಗ ಸುದ್ದಿ

**ಮಾನ್ವಿ,ಫೆ.14–** ಪಟ್ಟಣದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ನಡೆದ ವಿವಿಧ ಜಯಂತಿಗಳ ಪೂರ್ವ ಭಾವಿ ಸಭೆಯಲ್ಲಿ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಮಾತನಾಡಿ ತಾಲೂಕು ಆಡಳಿತದಿಂದ ತಾಲೂಕಿನ ವಿವಿಧ ಸಮುದಾಯಗಳ ಸಹಯೋಗದಲ್ಲಿ ಮಹಾತ್ಮರ ಜಯಂತಿಗಳನ್ನು ಆಚರಿಸುವ ಮೂಲಕ ಅವರ ಜೀವನ ಹಾಗೂ ತತ್ವ ಅದರ್ಶಗಳನ್ನು ಜನರಿಗೆ ತಿಳಿಸುವ ಉದ್ದೇಶದಿಂದ ಮಹಾನಿಯರ ಜಯಂತಿಗಳನ್ನು ಆಚರಿಸಲಾಗುತ್ತಿದೆ. ಫೆ.15 ರಂದು ಸಂತಸೇವಾಲಾಲ್ ಜಯಂತಿ, ಫೆ.19 ರಂದು ಛತ್ರಪತಿ ಶಿವಾಜಿ ಜಯಂತಿ, ಫೆ.20 ರಂದು ಸಂತ ಕವಿ ಸರ್ವಜ್ಞ ಜಯಂತಿ, ಮಾ.1 ರಂದು ಶ್ರೀ ರೇಣುಕಾ ಚಾರ್ಯ ಜಯಂತಿ, ಮಾ.3 ರಂದು ಶ್ರೀ ಯೋಗಿ ನಾರೇಯಣಯತೀಂದ್ರರ ಜಯಂತಿಗಳನ್ನು ತಾಲೂಕು ಆಡಳಿತ ಹಾಗೂ ಸಮುದಾಯಗಳ ಸಹಭಾಗಿತ್ವದಲ್ಲಿ ಅರ್ಥಪೂರ್ಣ ವಾಗಿ ಆಚರಿಸಲಾ ಗುವುದು ಮಹಾತ್ಮರ ಕುರಿತು ಉಪನ್ಯಾಸಕರಿಂದ ಉಪನ್ಯಾಸ, ಸಮುದಾಯಗಳಲ್ಲಿ ಉತ್ತಮ ಸಾಧನೆಯನ್ನು ತೋರಿದ ಸಾಧಕರಿಗೆ ತಾಲೂಕು ಆಡಳಿದಿಂದ ಸನ್ಮಾನಿಸಿ ಗೌರವಿಸಲಾಗುವುದು. ತಾಲೂಕಿನ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಸರ್ಕಾರಿ ಜಯಂತಿಗಳನ್ನು ಆಚರಿಸಿ ನಂತರ ತಾಲೂಕು ಆಡಳಿತದಿಂದ ನಡೆಯುವ ಜಯಂತಿ ಕಾರ್ಯಕ್ರಮ ಗಳಲ್ಲಿ ಭಾಗವಹಿಸುವಂತೆ ತಿಳಿಸಿದರು. **(2ನೇ ಪುಟಕ್ಕೆ)**

## ಸಾಧನೆಗಳಿಲ್ಲದೆ ಸಾವಿರ ದಿನಗಳಲ್ಲಿ ಸಾವಿರ ಸಮಸ್ಯೆಗಳು ಸೃಷ್ಟಿಯಾಗಿವೆ: ಬಿ.ವೈ. ವಿಜಯೇಂದ್ರ

### ಸಾವಿರ ದಿನ ಸಾವಿರ ಸಮಸ್ಯೆ ಬಿಜೆಪಿಯಿಂದ ಪೋಸ್ಟರ್ ಬಿಡುಗಡೆ

**ಬೆಂಗಳೂರು, ಫೆ. 14–** ರಾಜ್ಯದ ಕಾಂಗ್ರೆಸ್ ಸರ್ಕಾರ ಸಾವಿರ ದಿನಗಳ ಸಮಾವೇಶಕ್ಕೆ ಕಿಡಿಕಾರಿರುವ ರಾಜ್ಯ ಬಿಜೆಪಿ, ಸಾವಿರ ದಿನ, ಸಾವಿರ ಸಮಸ್ಯೆ ಎಂದು ಸರ್ಕಾರವನ್ನು ಅಣಕಿಸುವ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿದೆ.

ಬಿಜೆಪಿ ಕಚೇರಿಯಲ್ಲಿಂದು ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿ, ಸಾಧನೆಗಳಿಲ್ಲದೆ ಈ ಸರ್ಕಾರ ಸಮಾವೇಶ ಮಾಡುತ್ತಿದೆ. ಸಾವಿರ ದಿನಗಳಲ್ಲಿ ಸಾವಿರ ಸಮಸ್ಯೆಗಳು ಸೃಷ್ಟಿಯಾಗಿವೆ ಎಂದು ಟೀಕಿಸಿದರು.

ಕೇಂದ್ರ ಸರ್ಕಾರ ಕಾಯಕವೇ ಕೈಲಾಸ ಎಂಬ ನೀತಿಯನ್ನು ಅಳವಡಿಸಿಕೊಂಡು ದೇಶವನ್ನು ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಸಿದ್ದರೆ, ರಾಜ್ಯ



ಸರ್ಕಾರ ಕಾಯುವುದೇ ಕೆಲಸ ಎಂಬಂತೆ ನಡೆದುಕೊಳ್ಳುತ್ತಿದೆ. ಪಂಚ ಗ್ಯಾರಂಟಿಗಳು, ಪಂಕ್ಚರ್ ಆಗಿ ಬಹುದಿನಗಳೇ ಆಗಿವೆ. ಎರಡೂ ಮುಕ್ಕಾಲು ವರ್ಷದಲ್ಲಿ ರಸ್ತೆಗಳ ಗುಂಡಿ ಮುಚ್ಚಲು ಆಗಿಲ್ಲ. ಅಭಿವೃದ್ಧಿ ಮಾಡಲು ಕಾಂಗ್ರೆಸ್ ಸರ್ಕಾರದಿಂದ ಆಗಿಲ್ಲ. ಇವರ ಸಾಧನೆ ಭ್ರಷ್ಟಾಚಾರ ಅಷ್ಟೆ. ಭ್ರಷ್ಟಾಚಾರದಲ್ಲಿ ದೇಶಕ್ಕೆ ಮಾದರಿಯಾಗಿದ್ದಾರೆ ಎಂದು ಆರೋಪಿಸಿದರು.

ಸಾವಿರ ಸುಳ್ಳು ಹೇಳಿ ಕಾಂಗ್ರೆಸ್ ಸರ್ಕಾರ ಜನರಿಗೆ ಮೋಸ ಮಾಡುತ್ತಿದೆ. ಹೈಕಮಾಂಡ್‌ಗೆ ಸರ್ಕಾರ ಅಡವಿಟ್ಟಿದೆ. ಇಲ್ಲಿ ಲೂಟಿ ಮಾಡಿ ಹೈಕಮಾಂಡ್‌ನ್ನು ತೃಪ್ತಿಪಡಿಸುವ ಕೆಲಸ ನಡೆದಿದೆ. ಇದೊಂದು ನಾಲಾಯಕ್ ಅಭಿವೃದ್ಧಿ ಇಲ್ಲದ ಸರ್ಕಾರ ಎಂದು ಟೀಕಿಸಿದರು.

ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದಾಗ ನಮ್ಮ ಮೇಲೆ ಶೇ. 40 ರಷ್ಟು ಕಮಿಷನ್ ಆರೋಪ ಮಾಡಿದರು. ಇವರು ಅಧಿಕಾರಕ್ಕೆ ಬಂದ ಮೇಲೆ ವಾಲ್ಮೀಕಿ ಹಗರಣ, ಮುಡಾ ಹಗರಣ, ಸ್ಮಾರ್ಟ್ ವಿದ್ಯುತ್ ಮೀಟರ್ ಹಗರಣ ಅಬಕಾರಿ ಹಗರಣ, ಗೃಹಲಕ್ಷ್ಮಿ ಹಗರಣಗಳು ನಡೆದಿ. ಎರಡು ತಿಂಗಳ ಗೃಹಲಕ್ಷ್ಮಿ ಹಣ ಎಲ್ಲಿಗೆ ಹೋಗಿದೆ ಎಂಬುದು ಯಾರಿಗೂ ಗೊತ್ತಿಲ್ಲ ಎಂದು ದೂರಿದರು.

ಕಾಂಗ್ರೆಸ್ ಸರ್ಕಾರದ **(2ನೇ ಪುಟಕ್ಕೆ>>>)**

## ಬೀದಿ ನಾಟಕದ ಮೂಲಕ ಆರೋಗ್ಯ ಜಾಗೃತಿ ಕಾರ್ಯಕ್ರಮ

ಯುವಮಾರ್ಗ ಸುದ್ದಿ



**ಮಾನ್ವಿ,ಫೆ.14–** ತಾಲೂಕಿನ ನೀರ ಮಾನ್ವಿ ಗ್ರಾಮದ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ಶ್ರೀ ರೇಣುಕಾ ಯಲ್ಲಮ್ಮ ದೇವಿ ಜಾತ್ರೆ ಅಂಗವಾಗಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಆರೋಗ್ಯ ಇಲಾಖೆ ಹಾಗೂ ಮುಖಾಮುಖಿ ಕಲಾ ತಂಡ ಸಂಯುಕ್ತಾಶ್ರಯದಲ್ಲಿ ನಡೆದ ಆರೋಗ್ಯ ಜಾಗೃತಿ ಬೀದಿ ನಾಟಕ ಪ್ರದರ್ಶನಕ್ಕೆ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್.ದಾಸಪ್ಪನವರು ಚಾಲನೆ ನೀಡಿ ರಾಜ್ಯ ಸರಕಾರವು ಜನರಿಗೆ ಉತ್ತಮ ಆರೋಗ್ಯವನ್ನು ಒದಗಿಸುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆಯ ಮೂಲಕ ವಿವಿಧ ಆರೋಗ್ಯ ಯೋಜನೆ ಮತ್ತು ಸೇವೆಗಳನ್ನು ಒದಗಿಸುತ್ತಿದ್ದರು ಕೂಡ ಸಾರ್ವಜನಿಕರಿಗೆ ಆರೋಗ್ಯ ಇಲಾಖೆಯ ಯೋಜನೆಗಳ ಬಗೆ ಮಾಹಿತಿ ಇಲ್ಲದೆ ಇರುವುದರಿಂದ ಫಲಾನುಭವಿಗಳಿಗೆ ಆರೋಗ್ಯ ಯೋಜನೆಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ ಅದ್ದರಿಂದ ಜನರಿಗೆ ಆರೋಗ್ಯ ಇಲಾಖೆಯ ಯೋಜನೆಗಳ ಮಾಹಿತಿಯನ್ನು ಪರಿಣಿತ ಕಲಾ ತಂಡದ ಮೂಲಕ ಬೀದಿ ನಾಟಕ ಪ್ರದರ್ಶನದ ಮೂಲಕ ಆರೋಗ್ಯ ಇಲಾಖೆಯ ಯೋಜನೆಗಳ, ಸೇವೆಗಳ ಬಗ್ಗೆ ಜಾಗೃತಿ.ಮೂಡಿಸಲಾಗುತ್ತಿದೆ ಎಂದು ತಿಳಿಸಿದರು. ಮುಖಾಮುಖಿ ಕಲಾ ತಂಡದ **(2ನೇ ಪುಟಕ್ಕೆ)**

## ಸಿರವಾರವನ್ನು ನೂತನ ಸಿಂಧನೂರು ಜಿಲ್ಲೆಗೆ ಸೇರಿಸಲು ತೀವ್ರ ವಿರೋಧ: ಎನ್. ಉದಯಕುಮಾರ್ ಆಗ್ರಹ

ಯುವಮಾರ್ಗ ಸುದ್ದಿ

**ಸಿರವಾರ,ಫೆ.14–** ಸಿರವಾರದಿಂದ ಜಿಲ್ಲಾ ಕೇಂದ್ರವಾದ ರಾಯಚೂರು ಕೇವಲ 35 ಕಿಲೋಮೀಟರ್ ದೂರದಲ್ಲಿದೆ. ಆದರೆ, ಪ್ರಸ್ತಾವಿತ ಸಿಂಧನೂರು ನಗರವು ಸಿರವಾರದಿಂದ ಸುಮಾರು 70 ರಿಂದ 80 ಕಿಲೋಮೀಟರ್ ದೂರದಲ್ಲಿದೆ. ಜಿಲ್ಲಾ ಕೇಂದ್ರಕ್ಕೆ ಹೋಗಲು ಜನರು ಈಗಿರುವ ದೂರಕ್ಕಿಂತ ಎರಡರಷ್ಟು ಹೆಚ್ಚು ಪ್ರಯಾಣ ಮಾಡಬೇಕಾಗುತ್ತದೆ. ಸಿರವಾರ ತಾಲೂಕಾಗಿ 8 ವರ್ಷ ಕಳೆದರೂ ತಾಲೂಕು ಮಟ್ಟದ 28 ಇಲಾಖೆಗಳ ಕಚೇರಿಗಳಿಲ್ಲ. ಇದರಿಂದ ಜನಸಾಮಾನ್ಯರು ಸಣ್ಣ ಪುಟ್ಟ ಕೆಲಸಗಳಿಗೂ ಬೇರೆಡೆ ಅಲೆಯುವಂತಾಗಿದೆ. ಇರುವ ಸಮಸ್ಯೆಗಳನ್ನೇ ಬಗೆಹರಿಸದ ಸರ್ಕಾರ, ಈಗ ಮತ್ತಷ್ಟು ದೂರವಿರುವ ಸಿಂಧನೂರು ಜಿಲ್ಲೆಗೆ ಸೇರಿಸಲು ಹೊರಟಿರುವುದು ವಿಪರ್ಯಾಸ ಎಂದು ಆಗ್ರಹಿಸಿ ಮುಖಂಡರಾದ



ಎನ್. ಉದಯಕುಮಾರ್ ಸಾಹುಕಾರ ಅವರು ತೀವ್ರವಾಗಿ ಖಂಡಿಸಿದ್ದಾರೆ.

ಪಟ್ಟಣದ ಅವರ ನಿವಾಸದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಶಕಗಳಿಂದ ಜನರು ರಾಯಚೂರಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದಾರೆ. ಸಿರವಾರ ತಾಲೂಕಿನ ಭೌಗೋಳಿಕ ಪರಿಸ್ಥಿತಿ, ಜನರ ಭಾವನೆ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ನಿರ್ಧಾರವು ಅವೈಜ್ಞಾನಿಕವಾಗಿದೆ ಸಿರವಾರ ತಾಲೂಕಿನ ಸಮಗ್ರ ಅಭಿವೃದ್ಧಿ ನಮ್ಮ ಗುರಿಯಾಗಬೇಕೇ ಹೊರತು, ಆಡಳಿತಾತ್ಮಕವಾಗಿ ಜನರಿಗೆ ತೊಂದರೆ ಕೊಡುವ ನಿರ್ಧಾರಗಳಲ್ಲ. ಆಡಳಿತಾತ್ಮಕ ಅನುಕೂಲ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಸಿರವಾರವನ್ನು ರಾಯಚೂರು ಜಿಲ್ಲೆಯಲ್ಲೇ ಉಳಿಸಿಕೊಳ್ಳುವುದು ಸೂಕ್ತ. ಸಿಂಧನೂರು ಜಿಲ್ಲೆಗೆ ಸೇರಿಸುವ ನಿರ್ಧಾರವು ಜನಸಾಮಾನ್ಯರಿಗೆ, ರೈತರಿಗೆ ಮತ್ತು ಬಡವರಿಗೆ ಆಡಳಿತಾತ್ಮಕವಾಗಿ ದೊಡ್ಡ ಹೊರೆಯಾಗಲಿದೆಯೇ ಹೊರತು ಯಾವುದೇ ಲಾಭವಿಲ್ಲ **(2ನೇ ಪುಟಕ್ಕೆ)**

## ರಾಜ್ಯವನ್ನು ದಿವಾಳಿ ಮಾಡುತ್ತಿರುವ, ಯೋಗ್ಯತೆ ಇಲ್ಲದ ಸರ್ಕಾರ : ವಜ್ಜಲ್

### ಸಾವಿರ ಹಗರಣದಿಂದ, ಸಾವಿರ ದಿನ ಪೂರೈಸಿದ ಕಾಂಗ್ರೆಸ್

ಯುವಮಾರ್ಗ ಸುದ್ದಿ

**ಲಿಂಗಸೂಗೂರು,ಫೆ.14–** ರಾಜ್ಯವನ್ನು ದಿವಾಳಿ ಮಾಡಿ, ಸಾಲದ ಸುಳಿಯಲ್ಲಿ ಸಿಲುಕಿರುವ ರಾಜ್ಯ ಸರ್ಕಾರದ ಸಾವಿರ ದಿನಗಳ ಸಾಧನೆ ಶೂನ್ಯ ಸಾಧನೆ ಎಂದು ಶಾಸಕ ಮಾನಪ್ಪ ವಜ್ಜಲ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕಳೆದ ಬಡ್ಜಟ್ ನಲ್ಲಿ ಘೋಷಣೆ ಮಾಡಿದ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡದೆ ಕಲ್ಯಾಣ ಕರ್ನಾಟಕ ಭಾಗವನ್ನು ಸಂಪೂರ್ಣ ನಿರ್ಲಕ್ಷ ಮಾಡಿದೆ, ಪುನಃ ಬಡ್ಜಟ್ ಮಂಡನೆಗೆ ತಯಾರಾಗುತ್ತಿರುವ ರಾಜ್ಯ ಕಾಂಗ್ರೆಸ್ ಸಾಧನೆ ಶೂನ್ಯ ಸಾಧನೆಯಾಗಿದೆ. ಗ್ಯಾರಂಟಿ ಯೋಜನೆಗಳ ಹೆಸರಲ್ಲಿ ರಾಜ್ಯ ಸರ್ಕಾರ ಪ್ರತಿಯೊಬ್ಬ ಪ್ರಜೆಯ ಮೇಲೆ ಸಾಲದ ಹೊರೆ ಹಾಕುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನನ್ನ ಮಾತಕ್ಷೇತ್ರದಲ್ಲಿ ಅಕ್ರಮ ಸಕ್ರಮಕ್ಕೆ 1200 ಅರ್ಜಿಗಳು ಬಂದಿದ್ದು ಕೇವಲ 4 ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗಿದೆ ಇದರಿಂದ 30-40 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿರುವ ಬಡ ರೈತರಿಗೆ ಮಹಾ ಮೋಸ ಮಾಡಿದಂತಾಗಿದೆ. ಈಗಾಗಲೇ ದೂರದ ಮುಂಬೈ, ಪುಣೆ ಗಳಿಗೆ ಗುಳೆ ಹೋಗುತ್ತಿದ್ದಾರೆ. ಸರ್ಕಾರ ಈಗ ಏಕ ಏಕಿ ಜಮೀನುಗಳು ಅರಣ್ಯ ಇಲಾಖೆ ಸಂಬಂದಿಸಿದ್ದು ಎಂದು ಹೇಳಿದರೆ ಬಡ ರೈತರ ಪರಿಸ್ಥಿತಿ ಏನಾಗಬಹುದು ಎಂಬ ಕಿಚಿತ್ತು ಯೋಚನೆ ಇಲ್ಲದ ನಾಲಾಯಕ್ ಸರ್ಕಾರ ಇದು ಎಂದು




ಹೇಳಿದರು. ಭ್ರಷ್ಟಾಚಾರದ ಪಿತಾಮಹ ಕಾಂಗ್ರೆಸ್ ಸರ್ಕಾರ – ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಅಭಿವೃದ್ಧಿ ಮಾಡದೆ ಜನರ ಜೋಬಿಗೆ ಕತ್ತರಿ ಹಾಕುವ ಕೆಲಸ ಮಾಡುತ್ತಿದೆ. ಮೂಡ ಹಗರಣ, ವಾಲ್ಮೀಕಿ ನಿಗಮ, ವಕ್ಫ, ಅಬಕಾರಿ ಇಲಾಖೆಯಲ್ಲಿ, ಸ್ಮಾರ್ಟ್ ಮೀಟರ್ ಹಗರಣ, ಅನ್ನಭಾಗ್ಯ ಅಕ್ಕಿ ಕಾಲಸಂತೆಯಲ್ಲಿ ಮಾರಾಟ, ಬಿಪಿ ಎಲ್ ನಿಂದ ಎ ಪಿ ಎಲ್ ಕಾರ್ಡ್ ವರ್ಗಾವಣೆ ಮಾಡಿ ಜನರನ್ನು ಗೊಂದಲಗೋಳಿಸಿದ್ದು, ವಸತಿ ಯೋಜನೆಗಳಲ್ಲಿ ಮೀಸಲಾತಿ, ಮಹಿಳಾ ಅಧಿಕಾರಿಗಳ ಮೇಲೆ ಕೊಲೆ ಬೆದರಿಕೆ, ಎ ಟಿ ಎಂ ಹಣ ದರೋಡೆಗಳು, ಈಗೆ ಹೇಳುತ್ತಾ ಹೋದರೆ ಕಾಂಗ್ರೆಸ್ ಸರ್ಕಾರದ ಸಾವಿರ ಹಗರಣಗಳನ್ನು ಹೇಳಬಹುದು ಎಂದು ತಿಳಿಸಿದರು.

ನಾರಾಯಣಪುರ ಡ್ಯಾಮನಿಂದ ಬೇರೆ ಜಿಲ್ಲೆಗೆ ನೀರು ಕೊಡುತ್ತಿದ್ದೂ ಪಕ್ಕದ ನಮ್ಮ ಲಿಂಗಸೂಗೂರು ತಾಲೂಕಿಗೆ ಕುಡಿಯುವ ನೀರಿನ ಸಮರ್ಪಕ ಸರಬರಾಜು ಮಾಡುವಲ್ಲಿ ತಾರತಮ್ಯ ಮಾಡುತ್ತಿರುವ ಯೋಗ್ಯತೆ ಇಲ್ಲದ ರಾಜ್ಯ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ಜನರು ತಕ್ಕ ಉತ್ತರ ನೀಡಲಿದ್ದಾರೆ ಎಂದು ಹೇಳಿದರು.

ಅಹ್ವಾನ :ತಾಲೂಕಿನ ಗೆಜ್ಜೆಲಗಟ್ಟ ಗ್ರಾಮದಲ್ಲಿ ಫೆ 15 ರಿಂದ ಫೆ 20 ರವರೆಗೆ ವೀರಾನಾಗಮ್ಮ ದೇವಸ್ಥಾನ ಲೋಕಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಗಿದ್ದು, ಪ್ರತಿ ದಿನ ಸಂಜೆ ರಾಜ್ಯದ ಪ್ರತಿಷ್ಠಿತ ಗಾಯಕರಿಂದ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ, ಮತ್ತು ಧಾರ್ಮಿಕ ಕಾರ್ಯಕ್ರಮಕ್ಕೆ ಕೇಂದ್ರ ಹಾಗೂ ರಾಜ್ಯದ ಸಚಿವರು ಆಗಮಿಸುತ್ತಿದ್ದು ತಾಲೂಕಿನ ಜನ ಈ ಒಂದು ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆ ಯಲ್ಲಿ ಆಗಮಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೊಷ್ಟಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ್, ಮುಖಂಡರಾದ ಅಯ್ಯಪ್ಪ ಮಾಳೂರು,ಕೆ ನಾಗಭೂಷಣ್, ಮುದುಕಪ್ಪ ನಾಯಕ, ಬೀಮಶೇನ್ ಕುಲಕರ್ಣಿ,ಇದ್ದರು.

## ಹೆಳವ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸಲು ವಿಳಂಬ: ಸರ್ಕಾರಕ್ಕೆ ಅಖಿಲ ಕರ್ನಾಟಕ ಹೆಳವ ಸಮಾಜದ ಪತ್ರ

ಯುವಮಾರ್ಗ ಸುದ್ದಿ

**ಬೆಂಗಳೂರು,ಫೆ.14–** ರಾಜ್ಯದಲ್ಲಿ ಶತಮಾನಗಳಿಂದ ಇತಿಹಾಸ ಮತ್ತು ವಂಶಾವಳಿಗಳನ್ನು ಸಂರಕ್ಷಿಸಿಕೊಂಡು ಬರುತ್ತಿರುವ ಹೆಳವ ಸಮುದಾಯವನ್ನು ಪರಿಶಿಷ್ಟ ಪಂಗಡದ (ST) ಪಟ್ಟಿಗೆ ಸೇರಿಸುವ ಪ್ರಕ್ರಿಯೆಯು ಕಳೆದ ಎಂಟು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದು, ಈ ಕುರಿತು ತಕ್ಷಣವೇ ಕ್ರಮ ಕೈಗೊಳ್ಳುವಂತೆ ಅಖಿಲ ಕರ್ನಾಟಕ ಹೆಳವ ಸಮಾಜವು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸಂಘದ ರಾಜ್ಯಾಧ್ಯಕ್ಷರಾದ ಎಂ. ನಾಗರಾಜು ಅವರು, ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಡಾ. ಎಲ್. ಶ್ರೀನಿವಾಸ್ ಅವರು ಸಿದ್ಧಪಡಿಸಿದ ಕುಲಶಾಸ್ತ್ರೀಯ ಅಧ್ಯಯನ ವರದಿಯು 2018ರಲ್ಲೇ ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಕೆಯಾಗಿದ್ದರೂ ಸಹ, ಈವರೆಗೆ ರಾಜ್ಯ ಸರ್ಕಾರದ ಅನುಮೋದನೆ ದೊರೆಯದೆ ಕಡತವು ಸಚಿವರ ಹಂತದಲ್ಲೇ ಬಾಕಿಯಿರುವುದು ಸಮುದಾಯಕ್ಕೆ ಮಾಡುತ್ತಿರುವ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಅತ್ಯಂತ ಕೆಳಹಂತದಲ್ಲಿರುವ ಈ ಸಮುದಾಯವು ಇಂದಿಗೂ ಅಲೆಮಾರಿಗಳಂತೆ ಜೀವನ ಸಾಗಿಸುತ್ತಿದ್ದು, ಇತರ ಹಲವು ಸಮುದಾಯಗಳಿಗೆ ಶಿಫಾರಸ್ಸು ನೀಡಿದ ಸರ್ಕಾರವು ಹೆಳವ ಸಮಾಜದ ವಿಷಯದಲ್ಲಿ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಅವರು ದೂರಿದ್ದಾರೆ. ಜನಪದ ಕಲೆ ಮತ್ತು ಸಾಂಸ್ಕೃತಿಕ ದಾಖಲೆಗಳನ್ನು ಉಳಿಸಿಕೊಂಡಿರುವ ಈ ಸಣ್ಣ ಸಮುದಾಯದ ಭವಿಷ್ಯವು ಕತ್ತಲೆಯ ಲ್ಲಿರುವ ಕಾರಣ, ಮುಖ್ಯಮಂತ್ರಿಗಳು ಈ ಕಡತವನ್ನು ಸಚಿವ ಸಂಪುಟದ ಮುಂದೆ ಮಂಡಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಮೂಲಕ ಸಾವಿರಾರು ಕುಟುಂಬಗಳಿಗೆ ನ್ಯಾಯ ಒದಗಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಇಂದಿಗೂ ಸಂವಿಧಾನಿಕ ಹಕ್ಕುಗಳಿಂದ ವಂಚಿತರಾಗಿರುವ ತಮ್ಮ ಮಕ್ಕಳಿಗೆ ಹೊಸ ಬೆಳಕು ನೀಡಲು ಸರ್ಕಾರವು ಮಾನವೀಯ ದೃಷ್ಟಿಯಿಂದ ಈ ದೀರ್ಘಕಾಲದ ಬೇಡಿಕೆಯನ್ನು ಈಡೇರಿಸಬೇಕೆಂದು ಮನವಿಯಲ್ಲಿ ವಿನಂತಿಸಲಾಗಿದೆ

## ಗಾರಿಗೆ ಜಾತ್ರೆ ಅಂಗವಾಗಿ ಮಹಿಳೆಯರಿಗಾಗಿ ನಡೆದ ದೇಸಿ ಕ್ರೀಡೆಗಳ ಸ್ಪರ್ಧೆ

**ಮಾನ್ವಿ,ಫೆ.14–** ಪಟ್ಟಣದ ಧ್ಯಾನ ಮಂದಿರದಲ್ಲಿ ಶಿವರಾತ್ರಿ ಅಂಗವಾಗಿ ನಡೆದ ಗಾರಿಗೆ ಜಾತ್ರೆ ಕಾರ್ಯಕ್ರಮ ಅಂಗವಾಗಿ ನಡೆದ ಮಹಿಳಾ ದೇಶಿ ಕ್ರೀಡಾ ಸ್ಪರ್ಧೆಗಳಿಗೆ ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಮಿಗಳು ಚಾಲನೆ ನೀಡಿ ಮಾತನಾಡಿ ನಮ್ಮ ಗ್ರಾಮೀಣ ಭಾಗದ ಮಹಿಳೆಯರು ಹೆಚ್ಚಾಗಿ ಭಾಗವಹಿಸುತ್ತಿದ್ದ ದೇಸಿ ಕ್ರೀಡೆಗಳು ಅಧುನಿಕತೆಯ ಹೆಸರಿನಲ್ಲಿ ಕಣ್ಮರೆಯಾಗುತ್ತಿವೆ ಅವುಗಳನ್ನು ಪುನಃ ಜನಪ್ರಿಯಗೊಳ್ಳಿಸುವ ಮೂಲಕ ಮೂಲ ದೇಸಿಯ ಕ್ರೀಡೆಗಳನ್ನು ಉಳಿಸುವ **(2ನೇ ಪುಟಕ್ಕೆ>>>)**



## ಮೊದಲನೇಯ ಪುಟದಿಂದ

# ಸಾಧನೆಗಳಿಲ್ಲದೆ ಸಾವಿರ ದಿನಗಳಲ್ಲಿ ಸಾವಿರ ಸಮಸ್ಯೆಗಳು ಸೃಷ್ಟಿಯಾಗಿವೆ: ಬಿ.ವೈ. ವಿಜಯೇಂದ್ರ

ಆಡಳಿತದಲ್ಲಿ ಯಾವುದೇ ಅಭಿವೃದ್ಧಿ ಇಲ್ಲದೆ ರಾಜ್ಯ 25 ವರ್ಷ ಹಿಂದಕ್ಕೆ ಹೋಗಿದೆ. ಆರ್ಥಿಕ ಪರಿಸ್ಥಿತಿಯು ದಿವಾಳಿಯಾಗಿದೆ. ನುಡಿದಂತೆ ನಡೆದುಕೊಂಡ ಸರ್ಕಾರ ಎಂದು ಹೇಳುತ್ತಿದ್ದಾರೆ. ಸರ್ಕಾರಿ ಹುದ್ದೆಗಳನ್ನೇ ಭರ್ತಿ ಮಾಡಿಲ್ಲ ಎಂದು ದೂರಿದರು.

ಪ್ರಾದೇಶಿಕ ಅಸಮಾನತೆಗೆ ಸಂಬಂಧಿದಂತೆ ಪ್ರೊ. ಗೋವಿಂದರಾವ್ ವರದಿ ಸಲ್ಲಿಕೆಯಾಗಿದೆ. ಶೇ. 65 ರಷ್ಟಿದ್ದ ಅಸಮಾನತೆ ಶೇ. 75 ಕ್ಕೆ ಏರಿಕೆಯಾಗಿದೆ. ಇಷ್ಟಾದರೂ ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಆಗಿಲ್ಲ. ಕಲಬುರುಗಿ ಜಿಲ್ಲೆ ಅತಿ ಹಿಂದುಳಿದ ಜಿಲ್ಲೆಯಾಗಿಯೇ ಉಳಿದಿದೆ. ಪ್ರಿಯಾಂಕ ಖರ್ಗೆ ಎಲ್ಲರ ಬಗ್ಗೆ ಮಾತನಾಡುತ್ತಾರೆ ಅವರ ಜಿಲ್ಲೆಯೇ ಅಭಿವೃದ್ಧಿಯಲ್ಲಿ ಹಿಂದುಳಿದಿದೆ ಎಂದರು.

ಅಭಿವೃದ್ಧಿಗೆ ಶಾಸಕರಿಗೆ ಅನುದಾನ ಕೊಟ್ಟಿಲ್ಲ. ವಿವಿಧ ಜಾತಿ ಸಮುದಾಯಗಳ ನಿಗಮಗಳಿಗೂ ಅನುದಾನ ಬಿಡುಗಡೆ ಮಾಡಿಲ್ಲ. ಇಷ್ಟಿರುವಾಗ ಇವರು ಯಾವ ರಾಮ ರಾಜ್ಯ ಮಾಡುತ್ತಾರಂತೆ ಎಂದು ವ್ಯಂಗ್ಯವಾಡಿದರು.

ಕೇಂದ್ರದಿಂದ ರಾಜ್ಯಕ್ಕೆ ವಿಶೇಷ ಅನುದಾನ ಹಂತ ಹಂತವಾಗಿ ಬಿಡುಗಡೆಯಾಗುತ್ತದೆ. ಅನುದಾನ ಬಳಕೆಗೆ ಪ್ರಮಾಣ ಪತ್ರ ನೀಡಬೇಕು. ಆದರೆ, ರಾಜ್ಯ ಸರ್ಕಾರ ಫೇಕ್ ಮತ್ತು ಫ್ಯಾಬ್ರಿಕೆಟೆಡ್ ಬಳಕೆ ಪತ್ರ ನೀಡಿದೆ ಎಂದು ವಿಜಯೇಂದ್ರ ಆರೋಪಿಸಿದರು.

**ರೈಲ್ವೆ ಯೋಜನೆಗೆ ಹಣ ಕೊಟ್ಟಿಲ್ಲ**–ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುದಾನ ನೀಡುತ್ತಿಲ್ಲ ಎಂದು ದೂರುತ್ತಿರುವ ರಾಜ್ಯ ಸರ್ಕಾರ ರೈಲ್ವೆ ಯೋಜನೆಗಳಿಗೆ ತನ್ನ ಪಾಲಿನ ಹಣ ಕೊಟ್ಟಿಲ್ಲ ಎಂಬ ದಾಖಲೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಬಿಡುಗಡೆ ಮಾಡಿದ್ದಾರೆ.

ಬಿಜೆಪಿ ಕಚೇರಿಯಲ್ಲಿಂದು ಮಹಾರಾಷ್ಟ್ರದ ನಾಂದೆಡ್‌ನಿಂದ ಬೀದರ್‌ಗೆ ಸಂಪರ್ಕ ಕಲ್ಪಿಸುವ 156 ಕಿ.ಮೀ. ರೈಲ್ವೆ ಯೋಜನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಮಹಾರಾಷ್ಟ್ರ ನತ್ನ ಪಾಲನ್ನು ಘೋಷಣೆ ಮಾಡಿದೆ ಆದರೆ ರಾಜ್ಯ ಸರ್ಕಾರ ಇದುವರೆಗೂ ಯೋಜನೆಗೆ ಹಣ ಕೊಟ್ಟಿಲ್ಲ. ಹಾಗಾಗಿ ಈ ಯೋಜನೆ ಜಾರಿಯಾಗಿಲ್ಲ. ರಾಜ್ಯಸಭಾ ಸದಸ್ಯ ಅಶೋಕ್ ಚೌಹ್ವಾಣ್ ತಮಗೆ ಬರೆದಿರುವ ಪತ್ರ ಬಿಡುಗಡೆ ಮಾಡಿದರು.

ರಾಜ್ಯ ಸರ್ಕಾರ ಕೇಂದ್ರವನ್ನು ದೂರುವ ಮೊದಲು ತನ್ನ ಪಾಲಿನ ಅನುದಾನವನ್ನು ಬಿಡುಗಡೆ ಮಾಡಬೇಕು. ಕೇಂದ್ರದ ಮೇಲೆ ಗೂಬೆ ಕೂರಿಸುವ ಕೆಲಸ ಬೇಡ ಎಂದರು.

# ತಾಲೂಕು ಆಡಳಿತದಿಂದ ವಿವಿಧ ಜಯಂತಿಗಳ ಪೂರ್ವ ಭಾವಿ ಸಭೆ

ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ, ಪುರಸಭೆ ಆರೋಗ್ಯ ನಿರೀಕ್ಷಕರಾದ ಮಹೇಶ ಕುಮಾರ, ತಾ.ವೀರಶೈವ ಲಿಂಗಾಯತ ಸಮಾಜದ ತಾ,ಅಧ್ಯಕ್ಷರಾದ ಹರಿಹರಪಾಟೀಲ್, ಗೌ.ಆಧ್ಯಕ್ಷರಾದ ಶ್ರೀಧರಸ್ವಾಮಿ, ಅ.ಭಾ.ವೀ.ಲಿಂ. ಮಹಾಸಭ ತಾಲೂಕು ಘಟಕದ ಅಧ್ಯಕ್ಷರಾದ ಅರುಣಚಂದಾ,ದೊಡಪ್ಪ ಹೂಗಾರ, ಜಗದೀಶ್ ಓತ್ತೂರ್,ಮೌನೇಶ ರಾಠೋಡ್, ಕೃಷ್ಣ ಜಾದನ್,ಚೇತನ್ ನಾಯಕ ವಕೀಲರು, ಸೇರಿದಂತೆ ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದರು.

# ಬೀದಿ ನಾಟಕದ ಮೂಲಕ ಆರೋಗ್ಯ ಜಾಗೃತಿ ಕಾರ್ಯಕ್ರಮ

ಕಲಾವಿದರು ಬೀದಿ ನಾಟಕ ಪ್ರದರ್ಶನದ ಮೂಲಕ ಬಾಲ್ಯವಿವಾಹದ ದುಷ್ಪರಿಣಾಮಗಳು, ವೈಯಕ್ತಿಕ ಆರೋಗ್ಯಕ್ಕೆ ವೈಯುಕ್ತಿಕ ಶೌಚಾಲಯ ಬಳಕೆ, ಹಾಗೂ ರಕ್ತಹೀನತೆ ತಡೆಗೆ ಹಾಗೂ ಸುರಕ್ಷಿತ ಹೆರಿಗೆಗೆ ಆಸ್ಪತ್ರೆಗೆ ಆಗಮಿಸಿ ಸಂತಸದಿಂದ ಮನೆಗೆ ತೆರಳಲು ಇರುವ ಜೆಎಸ್‌ಎಸ್‌ಕೆ, ನಗುಮಗು ವಾಹನ ಸೌಲಭ್ಯ, 108 ಆಂಬ್ಯುಲೆನ್ಸ್ ಸೇವೆ, ರಕ್ತಹೀನತೆ ತಡೆಗೆ ಅನಿಮೀಯಾ ಮುಕ್ತ ಪೌಷ್ಟಿಕ ಕರ್ನಾಟಕ, ತಾಯಿ ಎದೆಹಾಲಿನ ಮಹತ್ವ, ಲಸಿಕೆಗಳು, ಹದಿಹರಿಯದವರ ಆರೋಗ್ಯ ಸಮಸ್ಯೆಗಳು, ಅಗತ್ಯವುಳ್ಳವರಿಗೆ ರಕ್ತ ಒದಗಿಸುವಿಕೆ, ಉಚಿತ ಕನ್ನಡಕ ವಿತರಣೆ, ಕಣ್ಣಿನ ಪೋರೆ ಶಸ್ತ್ರಚಿಕಿತ್ಸೆ, ದಂತಭಾಗ್ಯದಡಿ ಹಲ್ಲಿನ ಸೆಟ್ ಅಳವಡಿಕೆ, ಸಂತಾನ ನಿರೋಧಕ ಶಸ್ತ್ರಚಿಕಿತ್ಸೆ, ಹೃದಯ ಆರೈಕೆಗಾಗಿ ಡಾ ಪುನೀತ್ ರಾಜಕುಮಾರ್ ಹೃದಯಜ್ಯೋತಿ ಯೋಜನೆ, ಕಿಡ್ನಿ ಆರೈಕೆಗೆ ಡಯಾಲಿಸಿಸ್ ಸೇವೆ ಮುಂತಾದವುಗಳು ಹಾಗೂ ಭ್ರೂಣ ಲಿಂಗಪತ್ತೆ ನಿಷೇಧ ಕಾಯ್ದೆಯಡಿ ದಂಡ ಜೈಲು ಶಿಕ್ಷೆ, ಸಮುದಾಯದಲ್ಲಿ ಕಂಡುಬರಬಹುದಾದ ಸಾಂಕ್ರಾಮಿಕ ರೋಗಗಳ ತಡೆಗೆ ಕ್ಷಿಪ್ರ ನಿಗಾವಣೆ, ಪರೀಕ್ಷೆ, ಕುಷ್ಟ ರೋಗ, ಕ್ಷಯರೋಗ, ಉಪಶಮನ ಆರೈಕೆ, ಆಪ್ತಸಮಾಲೋಚನೆ, ಕುರಿತು ಜಾತ್ರೆಗೆ ಆಗಮಿಸಿದ ಜನರಿಗೆ ಜಾಗೃತಿ ಮೂಡಿಸಲಾಯಿತು.

ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಸಮುದಾಯ ಆರೋಗ್ಯಾಧಿಕಾರಿ ಹುಸೇನಮ್ಮ, ಆರೋಗ್ಯ ನೀರಿಕ್ಷಣಾಧಿಕಾರಿ ಸಿದ್ದಾರೂಢ, ಪಿ.ಹೆಚ್.ಸಿ.ಓ. ಚಂದ್ರಿಕಾ, ಪೋಲಿಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದರು

# ಸಿರವಾರವನ್ನು ನೂತನ ಸಿಂಧನೂರು ಜಿಲ್ಲೆಗೆ ಸೇರಿಸಲು ತೀವ್ರ ವಿರೋಧ: ಎನ್. ಉದಯಕುಮಾರ್ ಆಗ್ರಹ

ಸರ್ಕಾರ ತಕ್ಷಣವೇ ಈ ಪ್ರಸ್ತಾವನೆಯನ್ನು ಕೈಬಿಡಬೇಕು ಮುಂಬರುವ ದಿನಗಳಲ್ಲಿ ಉಗ್ರವಾದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಲ್ಲದೇ ತುಂಗಭದ್ರಾ ನದಿಯ ಪುನರುಜ್ಜೀವನ, ಸ್ವಚ್ಛತೆ ಮತ್ತು ನದಿ ಮೂಲಗಳ ರಕ್ಷಣೆ ಕುರಿತು ನಿರ್ಮಲಾ ತುಂಗಭದ್ರ ಅಭಿಯಾನವು ಫೆ.28 ಮತ್ತುಮಾರ್ಚ್ 01ರಂದು ಶಿವಮೊಗ್ಗದ ಅಭಿಯಾನದಲ್ಲಿ ಪರಿಸರ ಸಂರಕ್ಷಣೆ ಮತ್ತು ನದಿಗಳ ಉಳಿವಿನ ಬಗ್ಗೆ ಜಾಗೃತಿ ಮೂಡಿಸುತ್ತಿರುವ ನಿರ್ಮಲಾ ತುಂಗಭದ್ರ ಅಭಿಯಾನದ ಮಹತ್ವವನ್ನು ವಿವರಿಸಲಿದ್ದು, ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ಸಿರವಾರ ಭಾಗದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಶಿವಮೊಗ್ಗದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಈ ಕಾರ್ಯಾಗಾರದಲ್ಲಿ ತಜ್ಞರು ಮಾಹಿತಿ ನೀಡಲಿದ್ದಾರೆ ಅಭಿಯಾನದ ಲಾಭ ಪಡೆಯಬೇಕೆಂದರು.

ಈ ಸಂದರ್ಭದಲ್ಲಿ ಮುಖಂಡರಾದ ರಮೇಶ ದರ್ಶನಕರ್, ಬಸವರಾಜ ಕಲ್ಲೂರು, ಎಂ. ಪ್ರಕಾಶಪ್ಪ, ಅರಳಪ್ಪ ಯದ್ದಲದಿನ್ನಿ, ಪರಶುರಾಮ್ ಸರೋದೆ, ಮಲ್ಲಪ್ಪ ನಾರಬಂಡಿ, ನಾಗೇಶ, ಜಯಪ್ಪ ಗುತ್ತೆದಾರ್, ಹುಲಿಗಪ್ಪ ಕರಿಬಿಲ್ಕರ್, ಬಸನಗೌಡ ಮುರ್ಕಿಗುಡ್ಡ, ರಮೇಶ ಭೋವಿ, ರಾಜಾ, ಸೇರಿದಂತೆ ಅನೇಕರಿದ್ದರು.

# ಗಾರಿಗೆ ಜಾತ್ರೆ ಅಂಗವಾಗಿ ಮಹಿಳೆಯರಿಗಾಗಿ ನಡೆದ ದೇಸಿ ಕ್ರೀಡೆಗಳ ಸ್ಪರ್ಧೆ

ಹಾಗೂ ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯವನ್ನು ಗಾರಿಗೆ ಜಾತ್ರೆ ಮೂಲಕ ಪ್ರತಿವರ್ಷ ಕಲ್ಮಠವು ವಿಶೇಷವಾಗಿ ಮಹಿಳೆಯ ರಿಗಾಗಿ ದೇಸಿ ಕ್ರೀಡೆಗಳ ಸ್ಪರ್ಧೆಯನ್ನು ಆಯೋಜಿಸಿಕೊಂಡು ಬರುತ್ತಿದೆ ಎಂದು ತಿಳಿಸಿದರು.
ನಂತರ ಧ್ಯಾನ ಮಂದಿರದ ಅವರಣದಲ್ಲಿ ಮಹಿಳೆಯರಿಗಾಗಿ ಅಯೋಜಿಸಲಾದ ದೇಸಿ ಕ್ರೀಡ ಸ್ಪರ್ಧೆಗಳಲ್ಲಿ ಮಹಿಳೆಯರು ಉತ್ಸಹದಿಂದ ಭಾಗವಹಿಸಿದರು.

ಹಗ್ಗಜಗ್ಗಾಟ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಕು.ಶೃತಿ ತಂಡದ ಸದಸ್ಯರು ಪಡೆದುಕೊಂಡರು,ದ್ವೀತಿಯ ಸ್ಥಾನವನ್ನು ರಮಮಾಣಿ ಸತ್ಯನಾರಾಯಣ ತಂಡದವರು ಪಡೆದುಕೊಂಡರು. ನಿಂಬೆಹಣ್ಣು ಚಮಚ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಸುಶ್ಮಿತಾ, ದ್ವೀತಿಯ ಸ್ಥಾನ ವನ್ನು ರಾಧ, ತೃತೀಯ ಸ್ಥಾನವನ್ನು ರಮಮಾಣಿ ಹಾಗೂ ಪುಷ್ಪವತಿ ಜಂಟಿಯಾಗಿ ಹಂಚಿಕೊಂಡರು. ಕೊಡ ಹೊತ್ತು ಓಡುವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಶಿವಲೀಲಾ, ದ್ವೀತಿಯ ಸ್ಥಾನ ವನ್ನು ಬಸವರಾಜೇಶ್ವರಿ, ತೃತೀಯ ಸ್ಥಾನವನ್ನು ನಿರ್ಮಲ ಪಡೆದುಕೊಂಡರು.

ಕಲ್ಯಾಣ ಮಂಟಪದ ಒಳಗಡೆ ನಡೆದ ರಂಗೋಲಿ ಸ್ಪರ್ಧೆಯಲ್ಲಿ 12 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿ ಮನಮೋಹಕವಾದ ಜಾತ್ರೆ,ಶಿವಪಾರ್ವತಿ ಸೇರಿದಂತೆ ವಿವಿಧ ರಂಗೋಲಿಗಳನ್ನು ಬಿಡಿಸಿದರು. ರಂಗೋಲಿ ಸ್ಪರ್ಧೆಯಲಿ ಪ್ರಥಮ ಸ್ಥಾನ ಪದ್ಮವತಿ, ದ್ವೀತಿಯ ಸ್ಥಾನ ಶೃತಿ,ತೃತೀಯ ಸ್ಥಾನ ಭಾಗ್ಯಶ್ರೀ ಹಾಗೂ ಶ್ರಾವಣಿ.ಪಡೆದುಕೊಂಡರು.
ಸ್ಪರ್ಧೆಗಳ ಉಸ್ತುವರಿಯನ್ನು ದೈಹಿಕ ಶಿಕ್ಷಕರಾದ

# ಭಾರತೀಯ ಸಂಸ್ಕೃತಿ, ನಾಗರೀಕತೆ ನಮ್ಮ ಹೆಮ್ಮೆ ವಿಶ್ವಕ್ಕೆ ಮಾದರಿ : ಡಾ.ರಾಜಶೇಖರ ಸ್ವಾಮಿಜೀ



**ಮಾದನಹಿಪ್ಪರಗಿ: ಫೆ.14:** ಒಂದು ಗ್ರಾಮ ಒಂದು ಸಂಸ್ಕೃತಿಕವಾಗಿ, ಧಾರ್ಮಿಕವಾಗಿ ಎತ್ತರಕ್ಕೆ ಬೆಳೆಯಲು ಅಲ್ಲಿನ ಮಠಗಳ ಪೂಜ್ಯರ ಶ್ರಮ ಮತ್ತು ಮಾರ್ಗದರ್ಶನವಿರುತ್ತದೆ. ಈ ನಾಡಿನಲ್ಲಿ ವೀರಶೈವ ಲಿಂಗಾಯತ ಮಠಗಳು ಸಂಪ್ರದಾಯ ಸಂಸ್ಕೃತಿ ನಾಗರೀಕತೆಗೆ ವಿಶ್ವಕ್ಕೆ ಮಾದರಿಯಾಗಿವೆ ಎಂದು ನಂದಗಾಂವ ವಿರಕ್ತ ಮಠದ ಡಾ.ರಾಜಶೇಖರ ಸ್ವಾಮಿಗಳು ನುಡಿದರು.

ಇಂದು ಮಾದನಹಿಪ್ಪರಗಿಯ ಸಂಗಮೇಶ್ವರ ಹಾಗೂ ಖಂಡೇಶ್ವರ ದೇವಸ್ಥಾನ ನೂತನ ಮಹಾದ್ವಾರ ಉದ್ಘಾಟಿಸಿ ಧರ್ಮ ಸಭೆಯನ್ನುದ್ದೇಶಿಸಿ ಮಾತನಾಡುತ್ತ, ಈಗಿನ ಕಾಲದಲ್ಲಿ ಎಲ್ಲಾ ರೀತಿಯ ಅನುಕೂಲಗಳಿದ್ದರು ದೇವರು, ಧರ್ಮ, ಜಾತ್ರೆ ಉತ್ಸವಗಳು ಮಾಡಲು ಇಚ್ಛಾಶಕ್ತಿ ಇರುವುದಿಲ್ಲ. ಈ ಗ್ರಾಮದ ಭಕ್ತರು ಪುಣ್ಯಕಾರ್ಯಗಳಿಗೆ ಧಾರ್ಮಿಕ ಕಾರ್ಯಗಳಿಗೆ ಸದಾ ಮುಂದೆ. ಭಾರತೀಯ ಸಂಸ್ಕೃತಿ, ನಾಗರೀಕತೆ ಜಗತ್ತಿನಲ್ಲಿ ಶ್ರೇಷ್ಠವಾಗಿದೆ. ಜಾತಿ ಮತ ಪಂಗಡಗಳಿದ್ದರೂ ನಾವೆಲ್ಲರೂ ಒಂದೇ ಎಂದು ಅರಿತುಕೊಂಡು ಹೋಗುವ ಧರ್ಮವೇ ವೀರಶೈವ ಧರ್ಮವಾಗಿದೆ. ಬಸವಣ್ಣನ ತತ್ವದಡಿಯಲ್ಲಿ ಎಲ್ಲರೂ ನನ್ನವರು ಎನ್ನುವ ಪರಂಪರೆಯಲ್ಲಿ ಧರ್ಮ, ನ್ಯಾಯ, ನೀತಿಯಲ್ಲಿ ಬಾಳಲು ಎಲ್ಲರು ಕೈ ಜೋಡಿಸಿದ್ದಾರೆ. ಜಾತ್ರೆ ಉತ್ಸವಗಳ ತವರೂರು ಮಾದನಹಿಪ್ಪರಗಿಯಲ್ಲಿ ತಿಂಗಳಿಗೊಂದು ಜಾತ್ರೆ ಉತ್ಸವ ನಡೆದೇ ಇರುತ್ತದೆ. ಯುವಕರು ಧರ್ಮ ಗುರುಪರಂಪರೆ ನ್ಯಾಯದ ದಾರಿಯಲ್ಲಿ ಸಾಗಲು ಇಂತ ಧರ್ಮ ಸಭೆಗಳು ಅವಶ್ಯವಾಗಿವೆ ಎಂದರು. ಧರ್ಮ ಸಭೆಯನ್ನು ಉದ್ಘಾಟಿಸಿದ ಯಳಸಂಗಿಯ ಸಿದ್ದಾರೂಢ ಮಠದ ಪರಮಾನಂದ ಸ್ವಾಮಿಗಳು ಮಾತನಾಡಿ ಆಸ್ಪತ್ರೆಗಳ ಸಂಖ್ಯೆ ಹೆಚ್ಚಾದರೆ ಅಲ್ಲಿ ರೋಗಿಗಳ ತವರೂರ, ಪೊಲೀಸರ ಠಾಣೆಗಳು ಹೆಚಾಗಿದ್ದರೆ ಕಳ್ಳರು, ಲಫಂಗರು, ಅಪರಾಧಿಗಳು ಹೆಚ್ಚಾಗಿದ್ದಾರೆಂದು ಅರ್ಥ. ಹಾಗೇ ಎಲ್ಲಿ ಸತ್ಸಂಗಗಳು ಅಧ್ಯಾತ್ಮಕ ಪ್ರವಚನಗಳು ಜಾತ್ರೆಗಳು ನಡೆಯುತ್ತವೆಯೋ ಅಲ್ಲಿ ಸಂಸ್ಕಾರವಂತರ ತರೂರು ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ ಎಂದರು.

ಸೋಲಾಪುರ ಲೋಕ ಸಭೆಯ ಮಾಜಿ ಸಂಸದ ಹಾಗೂ ಗೌಡಗಾಂವ ಸಂಸ್ಥಾನ ಹಿರೇಮಠದ ಡಾ.ಜಯಸಿದ್ದೇಶ್ವರ ಶಿವಾಚಾರ್ಯರು ಸಾನಿಧ್ಯವಹಿಸಿ ಆಶೀರ್ವಚನ ನೀಡುತ್ತ, ಈ ಗ್ರಾಮವೂ ಈ ನಾಡಿಗೆ ಸುಮಾರು 20 ಮಠಾಧೀಶರನ್ನು ನೀಡಿದೆ. ಗುರುಪರಂಪರೆಯಲ್ಲಿ ಎಲ್ಲವೂ ಮುಂದೆ ಸಾಗಿದೆ. ದೇವರು ನಮಗೆ ಎಲ್ಲವನ್ನು ದಾನದ ರೂಪದಲ್ಲಿ ಕೊಟ್ಟಿದ್ದಾನೆ. ಗಾಳಿ ನೀರು ಬೆಳಕು ಎಲ್ಲವನ್ನು ನೀಡಿದ್ದಾನೆ. ಅವನ ಸ್ಮರಣೆಯಿಂದ ಜೀವನ ಪಾವನವಾಗುತ್ತದೆ ಎಂದು ಹೇಳಿದರು. ಉಪ್ಪಿನ ಬೆಟಗೇರಿ ಕುಮಾರ ವಿರೂಪಾಕ್ಷ ಸ್ವಾಮಿಗಳು , ಸ್ಥಳೀಯ ಹಿರೇಮಠದ ಶಾಂತವೀರ ಶಿವಾಚಾರ್ಯರು, ಆಳಂದದ ರೇವಣಸಿದ್ಧ ಶಿವಶರಣ ಮಂಟಪದ ಚೆನ್ನಬಸವ ಪಟ್ಟದೇವರು ಮಾತನಾಡಿದರು. ವೇದಿಕೆಯ ಮೇಲೆ ಅಭಿನವ ಶಿವಲಿಂಗ ಸ್ವಾಮಿಗಳು, ಸರಸಂಬಾದ ವೀರಸೋಮಶ್ವರ ದೇವರು ಹಾಗು ಕಲಬುರಗಿ ಬೀದರ ಯಾದಗೀರ ಹಾಲೂ ಒಕ್ಕೂಟದ ಅಧ್ಯಕ್ಷ ಆರ್.ಕೆ.ಪಾಟೀಲ ಉಪಸ್ಥಿತರಿದ್ದರು.

ಇಂದು ಮುಂಜಾನೆ ಖಂಡೇಶ್ವರ ಪಾದಗಟ್ಟೆಯಿಂದ ಬೃಹತ ಕುಂಬೋತ್ಸವ ಹಾಗೂ ಕಳಸಗಳ ಮೆರವಣಿಗೆ ನಡೆದು ನಂತರ ದೇವಸ್ಥಾನದಲ್ಲಿ ಅಕ್ಕಮಹಾದೇವಿ ಹಾಗೂ ನಂದಿ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ನಡೆಯಿತು. ಗುರುಶಾಂತೇಶ್ವರ ವೈದಿಕ ವೃಂದದರಿಂದ ಹೋಮ ಹವನ ಕಾರ್ಯಕ್ರಮ ಜರುಗಿತು.

# ಮುಡಬಿ ಮುಕುಟಕ್ಕೆ ಸರ್ವಾಧ್ಯಕ್ಷರ ಪಟ್ಟ ಮತ್ತೊಂದು ಗರಿ: ಅಶೋಕರಡ್ಡಿ ಚಿಲುಮೆ



**ಸೇಡಂ ,ಫೆ ,14:** ಸಾಹಿತ್ಯ ಎಂದರೆ ಕೇವಲ ಕವನ, ಕಥೆ, ಕಾದಂಬರಿ, ನಾಟಕಗಳ ಸಂಗ್ರಹವಲ್ಲ. ಇದು ಮನುಷ್ಯನ ಅನುಭವಗಳ, ಭಾವನೆಗಳ ಮತ್ತು ತಮ್ಮೊಳಗಿನ ವಿಚಾರಗಳನ್ನು ವ್ಯಕ್ತಗೊಳಿಸುವ ಒಂದು ಮಾರ್ಗ, ಸಾಹಿತ್ಯ ನಮ್ಮ ಅಕ್ಕ ಪಕ್ಕದ ಜೀವನವನ್ನು ಪ್ರತಿಬಿಂಬಿಸುತ್ತದೆ. ಸಾಹಿತ್ಯ ನಮ್ಮ ಸಂಸ್ಕೃತಿ, ಸಂಪ್ರದಾಯ ಮತ್ತು ಮೌಲ್ಯಗಳನ್ನು ಉಳಿಸುತ್ತದೆ.ಶರಣ ಸಾಹಿತ್ಯ, ಜಾನಪದ ಸಾಹಿತ್ಯದ ಪರಂಪರೆಯನ್ನು ಮೈಗೂಡಿಸಿಕೊಂಡಿರುವ ಸಾಹಿತಿ, ಇತಿಹಾಸ ತಜ್ಞ, ಸಂಶೋಧಕರಾದ ತ್ರಿಮೂರ್ತಿ ಶ್ರೀ ಮುಡಬಿ ಗುಂಡೇರಾವ ಅವರಿಗೆ ಒಲಿದ ಬಂದ 22 ನೇ ಕಲಬುರಗಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಪಟ್ಟ.ಈ ಸುದ್ಧಿ ತಿಳಿದು ಕಲಬುರಗಿ ಜಿಲ್ಲೆಯ ಸಾಹಿತ್ಯಾಸಕ್ತರು ಪುಳಕಿತಗೊಂಡಿದ್ದಾರೆ.ಸೇಡಂ ತಾಲೂಕಿನಲ್ಲಿ ಮುಡಬಿ ಎಂದರೆ ಕನ್ನಡಾಂಬೆಯ ಸುಪುತ್ರ ಎಂದು ಕನ್ನಡಾಭಿಮಾನಿಗಳು ಹೆಮ್ಮೆಯಿಂದ ಹೇಳುತ್ತಾರೆ.ಗುಂಡೇರಾವ ವ್ಯಕ್ತಿಯಲ್ಲ ಕನ್ನಡದ ಶಕ್ತಿ ಎಂದರೆ ಅತಿಶೋಯುಕ್ತಿಯೇನಲ್ಲ.ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಹೊಡಲ್ ಗ್ರಾಮದ ಮಹಾಂತಬಾಯಿ ಮತ್ತು ಅಂಬರಾಯ ಪೋಲಿಸ ಪಾಟೀಲ ದಂಪತಿಗಳ ಕರುಳಿನ ಕುಡಿಯಾಗಿ 01/06/1967 ರಂದು ಜನ್ಮತಾಳಿದ ಗುಂಡೇರಾವ ಸರಳ ಸ್ವಭಾವದ ಮೇರು ವ್ಯಕ್ತಿತ್ವ.ಸೇಡಂ ತಾಲೂಕಿನ ಪ್ರತಿ ಹಳ್ಳಿ □ ಹಳ್ಳಿಗೂ ಕನ್ನಡದ ರಥ ಎಳೆದ ಕೀರ್ತಿ ಮೂಡಬಿಯವರದು.2008 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸೇಡಂ ಘಟಕದ ಅಧ್ಯಕ್ಷರಾದ ನಂತರ ಕನ್ನಡ ಭಾಷೆಯ ಬೆಳವಣಿಗೆಗೆ ಅವಿರತವಾಗಿ ಶ್ರಮಿಸಿದ್ದಾರೆ.

ಕಸಾಪ ನಡೆ–ಹಳ್ಳಿ ಕಡೆ, ಶಾಲೆಗೊಂದು ಕಾರ್ಯಕ್ರಮ, ಕಾಲೇಜು ವಿದ್ಯಾರ್ಥಿಗಳಲ್ಲಿ ಕನ್ನಡದ ಕಿಚ್ಚು ಹೊತ್ತಿಸುವ ಉಪನ್ಯಾಸ ಮಾಲಿಕೆಗಳು ಮನೆ ಅಂಗಳದಲ್ಲಿ ಕವಿ ಪರಿಚಯ ಹೀಗೆ ಮೂರು ವರ್ಷಗಳಲ್ಲಿ 300 ಕಾರ್ಯಕ್ರಮಗಳು ಆಯೋಜಿಸಿದ ಅಪ್ಪಟ ಕನ್ನಡಿಗ,ಸೇಡಂ ತಾಲೂಕಾ 4 ನೇ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ನಡೆಸಿ ಮೂರು ವರ್ಷಗಳ ಸಾಧನಾ ಸಮಾವೇಶ ಸೇಡಂ ಜನತೆಯ ಮನಸ್ಸಿನಲ್ಲಿ ಇನ್ನು ಹಚ್ಚ ಹಸಿರಾಗಿಯೇ ಉಳಿದಿದೆ.ಸಂಶೋಧಕ ಮುಡಬಿ: ಕಲಬುರಗಿ ಜಿಲ್ಲೆಯಲ್ಲಿ ಹಲವಾರು ಈತಿಹಾಸಿಕ ಸ್ಥಳಗಳಿವೆ. ಕಲಬುರಗಿ ಕೋಟೆ, ಹಫ್ ಗುಂಬಜ್,ಶ್ರೀ ಶರಣಬಸವೇಶ್ವರ ದೇವಾಲಯ, ಬಂದೇನವಾಜ್ ದರ್ಗಾ,ಬುದ್ಧ ವಿಹಾರ ಇಂತಹ ಪರಿಸರದಲಿ ಅಧ್ಯಯನ ಮಾಡಿದ ಇವರು ಸೇಡಂ ತಾಲೂಕಿನಲ್ಲಿರುವ ಪ್ರತಿಯೊಂದು ಐತಿಹಾಸಿಕ ಸ್ಥಳಗಳ ಬಗ್ಗೆ ಲೇಖನಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ಯುವಕರಿಗೆ ಐತಿಹಾಸಿಕ ಸ್ಥಳಗಳ ಕುರಿತು ಆಸಕ್ತಿ ಮೂಡಿಸುವಲ್ಲಿ ಸಫಲರಾಗಿದ್ದಾರೆ. ವಿಶೇಷವಾಗಿ ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟ (ಮಳಖೇಡ ) ದ ಕೋಟೆ ಒಂದೊಂದು ಕಲ್ಲಿನ ಬಗ್ಗೆಯೂ ಆಳವಾದ ಅಧ್ಯಯನ ಮಾಡಿದಲ್ಲದೆ ಯುವ ಪೀಳಿಗೆಗೆ ಜ್ಞಾನ ಧಾರ ಎರೆದಿದ್ದಾರೆ.

ಮಾನ್ಯ ಸಚಿವರಾದ ಎಚ್. ಕೆ ಪಾಟೀಲರು ಮಳಖೇಡಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ರಾಷ್ಟ್ರಕೂಟರ ಇತಿಹಾಸ,ಪರಂಪರೆ, ಸಂಸ್ಕೃತಿಯು ಪರಿಚಯು ಮಾಡಿಕೊಟ್ಟಿದ್ದು ಅವಿಸ್ಮರಣೀಯ.ಸೇಡಿಂಬ ದುರ್ಗದ ಶಾಸನಗಳು,ಸೇಡಂ ತಾಲೂಕು ದರ್ಶನ,ಮುನ್ನೀರ ಸಾಸಿ ನಾಡು, ಕಾಳಗಿ ಕಾಳೇಶ್ವರ ಸಂಶೋಧನಾತ್ಮಕ ಕೃತಿಗಳು ರಚಿಸಿದ್ದಾರೆ. ತಾಲೂಕಿನಾದ್ಯಂತ ವಿದ್ಯಾರ್ಥಿಗಳ ತಂಡದೊಂದಿಗೆ ಕೊತ್ತಲ ಬಸವೇಶ್ವರ ದೇವಾಲಯ, ಪಂಚಲಿಂಗೇಶ್ವರ ಮಂದಿರ, ಬಿಜನಳ್ಳಿ ಯ ಮಹಾಶರಣ ಹರಳಯ್ಯ ಕಲ್ಯಾಣಮ್ಮನವರು ವಿಶ್ವ ಗುರು ಬಸವಣ್ಣನವರಿಗೆ ಒಪ್ಪಿಸಿದ ಚಮಾವುಗೆಗಳು, ಹಂದರಕಿಯಲ್ಲಿ ರಾಷ್ಟ್ರಕೂಟರ ಅರಸ 6 ನೇ ವಿಷ್ಣುವರ್ಧನನ ಕಾಲದ ಲೋಕೇಶ್ವರ ಮತ್ತು ಅನೇಶ್ವರ ದೇವಾಲಯ, ಮೋತಕಪಲ್ಲಿಯ ಬಲ ಭೀಮಸೇನ ದೇವಾಲಯ ಹೀಗೆ ಹತ್ತಾರು ಸ್ಥಳಗಳಿಗೆ ಭೇಟಿ ನೀಡಿ ಇತಿಹಾಸದ ಅರಿವು ಮೂಡಿಸಿದ ಹೆಗ್ಗಳಿಕೆ ಮುಡಬಿಯವರಿಗೆ ಸಲ್ಲುತ್ತದೆ.ಸುಮಾರು 25 ಕ್ಕೂ ಹೆಚ್ಚು ಕೃತಿಗಳು ರಚಿಸಿರುವ ಇವರು ಕನ್ನಡ ಭಾಷೆ ನೆಲ–ಜಲ ಹೋರಾಟದಲ್ಲಿ ಮುಂಚುಣಿಯಲ್ಲಿರುತ್ತಾರೆ. ಇಂತಹ ಬಹುಮುಖ ಪ್ರತಿಭೆಗೆ 22 ನೇ ಕಲಬುರಗಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಪಟ್ಟ ದಕ್ಕಿದು ಮುಡಬಿ ಮುಕುಟಕ್ಕೆ ಮತ್ತೊಂದು ಗರಿ ಲಭಿಸಿದು ಶಿಕ್ಷಣ ಇಲಾಖೆಗೆ ಸಂತೋಷ ಸಂಗತಿ.
ಅಶೋಕರಡ್ಡಿ ಚಿಲುಮೆ
ಮುಖ್ಯ ಶಿಕ್ಷಕರು ಸರಕಾರಿ ಪ್ರೌಢ ಶಾಲೆ ಕೋಲಕುಂದಾ

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

# ಸಮಗ್ರ ಕೃಷಿಗೆ ಜೆ ಎಸ್ ಡಬ್ಲ್ಯೂ ಉತ್ತೇಜನ– ಸಸಿ ಹಾಗೂ ಕೃಷಿ ಪರಿಕರಗಳ ವಿತರಣೆ



**ಸಂಡೂರು, ಫೆ.14–** ಸುಸ್ಥಿರ ಮತ್ತು ಲಾಭದಾಯಕ ಸಮಗ್ರ ಕೃಷಿ ಪದ್ಧತಿಯನ್ನು ಉತ್ತೇಜಿಸುವ ಉದ್ದೇಶದಿಂದ ಜೆ ಎಸ್ ಡಬ್ಲ್ಯೂ ಫೌಂಡೇಶನ್ ತೋರಣಗಲ್ಲು ಒಪಿಜೆ ಕೇಂದ್ರದಲ್ಲಿ ಸಸಿಗಳು ಮತ್ತು ಕೃಷಿ ಉಪಕರಣಗಳ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಡೂರು ಭಾಗದ ಆಯ್ದ ಗ್ರಾಮಗಳ 300 ರೈತರನ್ನು ಮಾದರಿ ಪ್ರಗತಿಪರ ರೈತರನ್ನಾಗಿಸಲು ರೂಪಿಸಲಾದ ಸಮಗ್ರ ಕೃಷಿ (ಐ.ಎಫ್.ಎಸ್) ಯೋಜನೆಯಡಿ ಈಗಾಗಲೇ ರೈತರಿಗೆ ಕೃಷಿ ಪ್ರವಾಸ, ತರಬೇತಿ ಕಾರ್ಯಕ್ರಮಗಳು ಹಾಗೂ ಮಣ್ಣಿನ ಪರೀಕ್ಷೆ ಕಾರ್ಯ ಪೂರ್ಣಗೊಳಿಸಲಾಗಿದೆ. ತರಕಾರಿ ಬೀಜಗಳು ಹಾಗೂ ಹೆರೆಹುಳು ಗೊಬ್ಬರ ಬೆಡ್ಗಳನ್ನು ಈಗಾಗಲೇ ವಿತರಿಸಲಾಗಿದ್ದು, ಇಂದು ನಡೆದ ಕಾರ್ಯಕ್ರಮದಲ್ಲಿ ಕೃಷಿ ಉಪಕರಣಗಳು ಹಾಗೂ ವಿವಿಧ ಹಣ್ಣು ಮತ್ತು ಅರಣ್ಯ ಸಸಿಗಳನ್ನು ವಿತರಿಸಲಾಯಿತು.

ಯೋಜನೆಯಂತೆ ಒಟ್ಟು 14,000ಕ್ಕೂ ಹೆಚ್ಚು ವಿವಿಧ ಜಾತಿಯ ಸಸಿಗಳನ್ನು ಸಂಗ್ರಹಿಸಲಾಗಿದ್ದು, ಮಾವು, ಪೇರಲೆ, ಸಪೋಟಾ, ತೆಂಗು, ನೇರಳೆ, ರಕ್ತ ಚಂದನ, ನಿಂಬೆ, ಅಡಿಕೆ ಸೇರಿದಂತೆ 25ಕ್ಕೂ ಹೆಚ್ಚು ತಳಿಗಳ ಸಸಿಗಳನ್ನು ಹಂತ ಹಂತವಾಗಿ ರೈತರಿಗೆ ನೀಡಲಾಗುತ್ತಿದೆ. ಇಂದು ದರೋಜಿ ಮತ್ತು ಮಾದಾಪುರ ಗ್ರಾಮದ ರೈತರಿಗೆ ಪ್ರಾಯೋಗಿಕವಾಗಿ ಸಸಿಗಳನ್ನು ಹಸ್ತಾಂತರಿಸಲಾಯಿತು.

ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಕೃಷಿ ಪರಿಕರ ಮತ್ತು ಸಸಿಗಳನ್ನು ವಿತರಿಸಿ ಮಾತನಾಡಿದ ಜೆ ಎಸ್ ಡಬ್ಲ್ಯೂ ಸ್ಟೀಲ್ ಲಿಮಿಟೆಡ್ ನ್ ಹಿರಿಯ ಉಪಾಧ್ಯಕ್ಷ ಸುನಿಲ್ ರಾಲ್ಫ್ "ಸಮಗ್ರ ಕೃಷಿ ಪದ್ಧತಿ ರೈತರಿಗೆ ನಿರಂತರ ಆದಾಯದ ಮೂಲವಾಗುತ್ತದೆ. ಹಣ್ಣು, ಅರಣ್ಯ ಹಾಗೂ ಪಶುಸಂಗೋಪನೆ ಆಧಾರಿತ ಚಟುವಟಿಕೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದರೆ ಆರ್ಥಿಕ ಸದೃಢತೆ ಸಾಧ್ಯ," ಎಂದು ತಿಳಿಸಿದರು.

ಜೆ ಎಸ್ ಡಬ್ಲ್ಯೂ ಫೌಂಡೇಶನ್ ದಕ್ಷಿಣ ಭಾರತ ಝೋನಲ್ ಹೆಡ್ ಪೆದ್ದಣ್ಣ ಬೀಡಲಾ ಮಾತನಾಡಿ " ರೈತರು ಸಸಿಗಳ ರಕ್ಷಣೆ ಮಾಡಿ ಪೋಷಣೆ ಮಾಡಬೇಕಾಗಿದೆ ಮತ್ತು ಎಲ್ಲಾ 300 ರೈತರಿಗೆ ಬಂದಿರುವ ಕೃಷಿ ಪರಿಕರಗಳು ಮತ್ತು ಸಸಿಗಳನ್ನು ಗ್ರಾಮ ಮಟ್ಟದಲ್ಲೇ ವಿತರಣೆ ಮಾಡಲು ವ್ಯವಸ್ಥೆ ಮಾಡಲಾಗಿದೆ– ಕಾರ್ಯಕ್ರಮದ ಸದುಪಯೋಗವನ್ನು ರೈತರು ಪಡೆದುಕೊಳ್ಳಬೇಕೆಂದು" ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಟ್ರ್ಯಾಕ್ಟರ್ ತಯಾರಿಕಾ ಕಂಪೆನಿಯಾದ ಎಸ್ಕಾರ್ಟ್ಸ್ ಕುಬಟೋ ಲಿಮಿಟೆಡ್ ಹಿರಿಯ ಅಧಿಕಾರಿಯಾದ ಬಿಜು ಜಾರ್ಜ್, ಜೆ ಎಸ್ ಡಬ್ಲ್ಯೂ ಫೌಂಡೇಶನ್ ಕೃಷಿ ಸಂಯೋಜನಾಧಿಕಾರಿ ನಾಗನಗೌಡ, ಅನುಷ್ಠಾನ ಸಂಸ್ಥೆ ಸ್ಕೋಡ್ ವೆಸ್ ನ ರಾಜ ಎನ್ ಪಿ, ಗಂಗಾಧರ, ಹರೀಶ್, ಧನಂಜಯ, ಕಾರ್ತಿಕ್ ಮತ್ತು 50 ಕ್ಕೂ ಅಧಿಕ ರೈತರು ಭಾಗವಹಿಸಿದ್ದರು.

# ದೇಶದ ಪೌರತ್ವವನ್ನು ಸಾಬೀತುಪಡಿಸಬೇಕಾದ ಸಂದಿಗ್ಧತೆ.– ಶ್ರೀನಿವಾಸ ಮೂರ್ತಿ




**ಬಳ್ಳಾರಿ ಫೆ, 14–** ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯ ನೆಪದಲ್ಲಿ ಈ ದೇಶದ ನಾಗರಿಕರು ತಮ್ಮ ರಾಜಕೀಯ ಹಕ್ಕನ್ನು ಮತ್ತು ದೇಶದ ಪೌರತ್ವವನ್ನು ಸಾಬೀತುಪಡಿಸಬೇಕಾದ

ಸಂದಿಗ್ಧತೆಗೆ ಈಡಾಗಿದ್ದಾರೆ. ಇದು ಪ್ರಜಾಪ್ರಭುತ್ವವನ್ನು ವೈಫಲ್ಯಗೊಳಿಸುವ ಹುನ್ನಾರದಂತೆ ಕಂಡುಬರುತ್ತದೆ ಎಂದು ಸರಳಾದೇವಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಡಾ.ಶ್ರೀನಿವಾಸ ಮೂರ್ತಿ ಆತಂಕ ವ್ಯಕ್ತಪಡಿಸಿದರು..

ನಗರದ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ರೂಸಾ ಅನುದಾನದಡಿಯಲ್ಲಿ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ್ದ ' ಭಾರತದ ಪ್ರಜಾಪ್ರಭುತ್ವ : ಅವಕಾಶ ಮತ್ತು ಸವಾಲುಗಳು ' ಒಂದು ದಿನದ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಭಾರತ ಸಂವಿಧಾನ ಅಂಗೀಕರಿಸಿದ ನಂತರ ಯಾವುದೇ ಅರ್ಹತೆ, ಸ್ಥಾನಮಾನಗಳನ್ನು ಪರಿಗಣಿಸದೆ ಕೇವಲ ವಯೋಮಿತಿಯನ್ನು ಆಧರಿಸಿ ಮತದಾನದ ಹಕ್ಕನ್ನು ನೀಡಲಾಯಿತು .ನಂತರ ಮತದಾನದ ವಯೋಮಿತಿಯನ್ನು ಇಳಿಸಲಾಯಿತು ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಕಲಬುರ್ಗಿ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಕಿರಣ ಗಾಜನೂರು ಎರಡನೇ ಮಹಾಯುದ್ಧದ ನಂತರ ತೃತೀಯ ಜಗತ್ತಿನ ಬಹುತೇಕ ರಾಷ್ಟ್ರಗಳಿಗೆ ಸ್ವಾತಂತ್ರ್ಯ ದೊರೆತು ತಮ್ಮದೇ ಸಂವಿಧಾನವನ್ನು ಅಳವಡಿಸಿಕೊಂಡು ಸರ್ಕಾರವನ್ನು ಸ್ಥಾಪಿಸಿಕೊಂಡಿವೆ. ಅವುಗಳಲ್ಲಿ ಭಾರತವು ಒಂದು. ಇತರೆ ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತವು ಸ್ಥಿರವಾದ ಪ್ರಜಾತಂತ್ರ ವ್ಯವಸ್ಥೆಯನ್ನು ಉಳಿಸಿಕೊಂಡು ಬಂದಿದೆ ಎಂದು ವಿಶ್ಲೇಷಿಸಿದರು. ಅಂಬೇಡ್ಕರ್ ರೂಪಿಸಿದ ಸಂವಿಧಾನ ಇದರ ರಚನಾ ಸಮಿತಿಯ ಹಲವಾರು ತಳ ಸಮುದಾಯಗಳ ಶೋಷಿತರ ಮತ್ತು ಮಹಿಳೆಯರ ಪ್ರಾತಿನಿಧ್ಯವನ್ನು ಹೊಂದಿತ್ತು. ಇವರೆಲ್ಲರ ದೂರ ದೃಷ್ಟಿ ಮತ್ತು ಪರಿಶ್ರಮದಿಂದ ರೂಪಿಸಲ್ಪಟ್ಟ ಸಂವಿಧಾನ ಸ್ಥಿರತೆಯನ್ನು ಪಡೆದುಕೊಂಡಿದೆ. ಭಾರತೀಯ ನಾಗರಿಕ ಭಾರತದ

ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಇನ್ನೂ ಹೆಚ್ಚು ದೃಢಪಡಿಸಲು ವೈಯಕ್ತಿಕ ಪ್ರಜಾಸತ್ತಾತ್ಮಕ ಗುಣಗಳನ್ನು ಅಳವಡಿಸಿಕೊಳ್ಳುವುದು ಅಗತ್ಯ.ವ್ಯಕ್ತಿಗತವಾಗಿ ಪ್ರಜಾಸತ್ತಾತ್ಮಕ ಗುಣಗಳನ್ನು ರೂಪಿಸಿಕೊಳ್ಳದ ವ್ಯಕ್ತಿ ತನ್ನ ರಾಷ್ಟ್ರವನ್ನು ಪ್ರಜಾಸತ್ತಾತ್ಮಕ ಗೊಳಿಸಲು ಸಾಧ್ಯವಿಲ್ಲ ಎಂದರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಹೊನ್ನೂರಾಲಿ ಭಾರತ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶ.ಕಳೆದ 70 ವರ್ಷಗಳಲ್ಲಿ ಹಲವಾರು ವಲಯಗಳಲ್ಲಿ ಭಾರತ ಪ್ರಜಾಪ್ರಭುತ್ವ ತನ್ನ ಸಾಧನೆ ಕಂಡುಕೊಂಡಿದೆ. ಆದರೆ ಇಂದಿಗೂ ಕೂಡ ಪ್ರಜಾಪ್ರಭುತ್ವಕ್ಕೆ ಹೊಸ ಸವಾಲುಗಳು ಎದುರಾಗುತ್ತಿವೆ. ಇಂತಹ ಸವಾಲುಗಳ ಮೇಲೆ ಬೆಳಕು ಚೆಲ್ಲುವುದು ಇಂದಿನ ವಿಚಾರ ಸಂಕೀರ್ಣದ ಆಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದರು.


ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ.ಜಿ.ಪ್ರಹ್ಲಾದ್ ಚೌದ್ರಿ ವಹಿಸಿದ್ದರು.

ವೇದಿಕೆಯ ಮೇಲೆ ಪ್ರಾಧ್ಯಾಪಕರಾದಡಾ.ವಿಜಯಕುಮಾರ್, ಡಾ. ಸರೋಜಾ ಬಿ, ಡಾ.ಕುಂಚಂ ನರಸಿಂಹಲು,ಡಾ.ಮಲ್ಲಿಕಾರ್ಜುನ ಮೋಕಾ,ಡಾ.ಹುಚ್ಚೂಸಾಬ್,ಡಾ. ದಸ್ತಗೀರಸಾಬ್ ದಿನ್ನಿ, ಡಾ.ಟಿ.ದುರುಗಪ್ಪ, ಇದ್ದರುಈ ಸಂದರ್ಭದಲ್ಲಿ ಪ್ರಾಧ್ಯಾಪಕರುಗಳಾದ ಡಾ.ಬಸವ ರಾಜ್, ಡಾ.ಶ್ರೀಧರ್ ಬರ್ಕಿ,ಡಾ.ರಾಬಿಯಾ ಬೇಗಂ, ಡಾ. ವೀರ ಪ್ರಸಾದ್, ಅತಿಥಿ ಉಪನ್ಯಾಸಕರಾದ ಗುರುರಾಜ್, ತಿಪ್ಪೇರುದ್ರ, ಬಸವರಾಜ್, ಪಾರ್ವತಮ್ಮ,ಶ್ರೀವಾಣಿ,ಸುಜಾತ, ಶ್ರೀನಿವಾಸ, ಕುಮಾ ರ್, ರೇವಣಸಿದ್ದಯ್ಯ, ನಾಗರಾಜ,ರವಿಚಂದ್ರ ಉಪಸ್ಥಿತರಿದ್ದರು.

**ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ**

**9743497111, 9743496111**

# ನಾಟಕಕಾರ ಶಂಕ್ರಯ್ಯ ಘಂಟಿಗೆ ಸನ್ಮಾನ




**ಕಲಬುರಗಿ,ಫೆ.14–**ಚಲನಚಿತ್ರ ಒಂದು ಸಂಕೀರ್ಣ ಕಲೆಯಾಗಿದ್ದು, ಸಾಮಾಜಿಕ ಸಂಗತಿಗಳ ಪ್ರತಿಬಿಂಬವಾಗಿರುತ್ತದೆ ಎಂದು ನಾಟಕಕಾರ ಶಂಕ್ರಯ್ಯ ಘಂಟಿ ಹೇಳಿದರು.

ಘಂಟಿಯವರು ಬರೆದು ನಟಿಸಿದ "ನಮ್ ಸಾಲಿ" ಚಲನ ಚಿತ್ರ ಅಂತರ್ ರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಪ್ರಶಸ್ತಿ ಪಡೆದ ನಿಮಿತ್ಯ ಫೆಬ್ರುವರಿ 12 ರಂದು ಸಂಜೆ ನಗರದ ಉದನೂರು ಕ್ರಾಸ್ ಬಳಿಯ ಅರಳಿ ಆರ್ಟ್ ಸ್ಟುಡಿಯೋದಲ್ಲಿ ಸಮಾನ ಮನಸ್ಕ ಕಲಾವಿದರ ಬಳಗ ನೀಡಿದ ಸನ್ಮಾನ ಸ್ವೀಕರಿಸಿದ ಅವರು ಮಾತನಾಡುತ್ತಿದ್ದರು.

ನಾನು ಬರೆದ ಕಥೆಯೊಂದು "ನಮ್ ಸಾಲಿ" ಎನ್ನುವ ಹೆಸರಿನಲ್ಲಿ ಚಲನಚಿತ್ರವಾಗಿದ್ದು ಸಂತೋಷ ತಂದಿದೆ, ಮಾತ್ರವಲ್ಲ 17 ನೆಯ ಬೆಂಗಳೂರು ಅಂತರಾಷ್ಟ್ರೀಯ ಚಿತ್ರೋತ್ಸವದಲ್ಲಿ ಎರಡನೆಯ ಅತ್ಯುತ್ತಮ ಕನ್ನಡ ಚಿತ್ರವೆಂದು ಪ್ರಶಸ್ತಿ ಗಳಿಸಿರುವುದು ನನ್ನ ಉತ್ಸಾಹವನ್ನು ಇಮ್ಮಡಿಗೊಳಿಸಿದೆ ಎಂದರು.

ಕಲಬುರಗಿಯ ನೆಲದ ಭಾಷೆಯನ್ನೇ ಈ ಚಿತ್ರದಲ್ಲಿ ಬಳಸಲಾಗಿದ್ದು, ಸ್ವತಃ ನಾನು ಮತ್ತು ನನ್ನ ಮಗಳು ಭಾವನಾ ಈ ಚಿತ್ರದಲ್ಲಿ ಅಭಿನಯಿಸಿದ್ದೇವೆ ಎಂದು ವಿವರಿಸುತ್ತ ಹಲವು ಅನುಭವಗಳನ್ನು ಹಂಚಿಕೊಂಡರು.

ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಸಂಗೀತ ಮತ್ತು ಲಲಿತಕಲಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಶಿವಾನಂದ ಬಂಟನೂರು ಮಾತನಾಡಿ ಕಳೆದ 4–5 ದಶಕಗಳಿಂದ ನಾಟಕ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಿರುವ ಶಂಕ್ರಯ್ಯ ಘಂಟಿ ಅವರು ಚಲನಚಿತ್ರ ಕ್ಷೇತ್ರಕ್ಕೂ ಪ್ರವೇಶಿಸಿರುವುದು ಅವರ ವಿಸ್ತರಿತ ಪ್ರತಿಭೆಗೆ ಸಾಕ್ಷಿಯಾಗಿದೆ ಎಂದು ವಿವರಿಸುತ್ತ, ಘಂಟಿಯವರು ತಮ್ಮ ಮೊದಲ ಚಿತ್ರಕ್ಕೇ ಪ್ರಶಸ್ತಿ ಪಡೆದುಕೊಂಡಿದ್ದು ಕಲಬುರ್ಗಿಯ ಸಾಂಸ್ಕೃತಿಕ ಲೋಕಕ್ಕೇ ಒಂದು ಹೆಮ್ಮೆಯ ಸಂಗತಿಯಾಗಿದೆ ಎಂದು ಪ್ರಶಂಸಿಸಿದರು.

ಇನ್ನೋರ್ವ ಅತಿಥಿ ವಿ.ಬಿ. ಬಿರಾದಾರ ಅವರು ಎಲ್ಲ ಕಲೆಗಳು ಸೌಂದರ್ಯದ ಅನುಭವ ನೀಡುತ್ತವೆ, ಘಂಟಿಯವರು ಒಬ್ಬ ಸೌಂದರ್ಯ ನಿರ್ಮಾತೃ ಎಂದರು.

ಖ್ಯಾತ ಕಲಾವಿದ ವಿಜಯ ಹಾಗರಗುಂಡಗಿ ಅಧ್ಯಕ್ಷತೆ ವಹಿಸಿದ್ದರು, ಕಲಾವಿದ ದೌಲತ್ರಾಯ ದೇಸಾಯಿ ನಿರೂಪಿಸಿದರು. ಗುರುಲಿಂಗ ಅರಳಿ, ಸಂಗಯ್ಯ ಹಳ್ಳದಮಠ, ಸಿದ್ದು ಮರಗೋಳ, ಸೂರ್ಯಕಾಂತ ನಂದೂರ, ಬಾಬುರಾವ್ ಎಚ್., ಡಾ. ಪರಶುರಾಮ ಮೊದಲಾದ ಕಲಾವಿದರು ಉಪಸ್ಥಿತರಿದ್ದರು.

# ಫೆ.16ಕ್ಕೆ ಖಂಡ್ರೆ ಅಭಿನಂದನಾ ಸಮಾರಂಭ



**ಭಾಲ್ಕಿ:ಫೆ.14** ಪಟ್ಟಣದಲ್ಲಿ ಫೆ.16ರಂದು ಸೋಮವಾರ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಈಶ್ವರ ಖಂಡ್ರೆ ಅವರ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ತಿಳಿಸಿದರು.

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಅಂದು ಸಾಯಂಕಾಲ 5 ಗಂಟೆಗೆ ಚನ್ನಬಸವಾಶ್ರಮ ಪರಿಸರದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ದಿವ್ಯ ಸಾನ್ನಿಧ್ಯದಲ್ಲಿ ಅಭಿನಂದನಾ ಸಮಾರಂಭ ಜರುಗಲಿದೆ ಎಂದರು.

ಹಿರೇಮಠ ಸಂಸ್ಥಾನ ಸಮಾಜದಲ್ಲಿ ಜನಪರ ಜೀವಪರ ಕಾರ್ಯಗಳನ್ನು ಕೈಗೊಳ್ಳವರನ್ನು ಸದಾ ಗುರುತಿಸುವುದರ ಜತೆಗೆ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಹಿತಿಕ ಕ್ಷೇತ್ರಗಳಲ್ಲಿ ಉತ್ತಮ ಸಾಧನೆಗೈದವರನ್ನು ಅಭಿನಂದಿಸಿ, ಪ್ರೋತ್ಸಾಹಿಸುವ ಕಾರ್ಯ ಮಾಡುತ್ತ ಬರುತ್ತಿದೆ.ಅದರಂತೆ ನಮ್ಮ ಶ್ರೀಮಠದ ಪರಮ ಶಿಷ್ಯರು ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿದ್ದು, ನಮ್ಮೆಲ್ಲರಿಗೂ ಅತೀವ ಸಂತಸವನ್ನುವುಂಟು ಮಾಡಿದೆ.ಈ ಭಾಗದ ಅಭಿವೃದ್ಧಿ ಮತ್ತು ಸಮುದಾಯದ ಪ್ರಗತಿಯಲ್ಲಿ ಖಂಡ್ರೆ ಪರಿವಾರದ ಕೊಡುಗೆ ದೊಡ್ಡದಿದೆ.

ಶತಾಯಷಿ ಡಾ.ಚನ್ನಬಸವ ಪಟ್ಟದ್ದೇವರು ಕಟ್ಟಿ ಬೆಳೆಸಿದ ನೂತನ ಅನುಭವ ಮಂಟಪದ ಪೂರ್ನನಿರ್ಮಾಣದ ನೀಲನಕಾಶೆಯನ್ನು ಸಚಿವರಿದ್ದ ಸಂದರ್ಭದಲ್ಲಿ ಈಶ್ವರ ಖಂಡ್ರೆ ಅವರು ಸಿದ್ಧಪಡಿಸಿ ಪ್ರಸ್ತುತ ಜಿಲ್ಲಾ ಉಸ್ತುವಾರಿ ಸಚಿವರಾಗಿ ಅನುಭವ ಮಂಟಪದ ಕಾಮಗಾರಿಗೆ ಅನುದಾನದ ಕೊರತೆ ಆಗದಂತೆ ನೋಡಿ ಕೊಂಡಿದ್ದಾರೆ.

ಇಂತಹ ಅನೇಕ ವಿಧಾಯಕ ಕಾರ್ಯಗಳು ಅವರು ಮಾಡುತ್ತಿದ್ದಾರೆ. ಅವರು ಅಭಿವೃದ್ಧಿ ಕೆಲಸದ ಜತೆಗೆ ಧಾರ್ಮಿಕ, ಸಮುದಾಯದ ಬೆಳವಣಿಗೆಗೆ ಅವಿರತವಾಗಿ ಶ್ರಮಿಸುತ್ತಿ ದ್ದಾರೆ.

ಅಂತಹ ಈಶ್ವರ ಖಂಡ್ರೆ ಅವರ ಅಭಿನಂದನಾ ಸಮಾರಂಭ ಹಿರೇಮಠ ಸಂಸ್ಥಾನದ ಸಹಯೋಗದಲ್ಲಿ ನಡೆಯಲಿದ್ದು ವಿವಿಧ ಸಂಘ ಸಂಸ್ಥೆಗಳು ಕೂಡ ಕೈಜೋಡಿಸಿವೆ.ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಅಭಿನಂದನಾ ಸಮಾರಂಭ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸಮಿತಿ ಅಧ್ಯಕ್ಷರಾಗಿ ರಾಜಶೇಖರ ಅಷ್ಟೂರೆ ಆಯ್ಕೆ

ಈಶ್ವರ ಖಂಡ್ರೆ ಅವರ ಅಭಿನಂದನಾ ಸಮಿತಿ ಅಧ್ಯಕ್ಷರನ್ನಾಗಿ ಹಿರಿಯ ನ್ಯಾಯವಾದಿ ರಾಜಶೇಖರ ಅಷ್ಟೂರೆ ಅವರನ್ನು ಆಯ್ಕೆ ಮಾಡಲಾಗಿದೆ. ಸಮಿತಿ ಅಧ್ಯಕ್ಷ ಅಷ್ಟೂರೆ ಅವರನ್ನು ಪೂಜ್ಯರು ಸನ್ಮಾನಿಸಿ, ಆಶೀರ್ವದಿಸಿದರು.

ಸುದ್ದಿಗೋಷ್ಠಿಯಲ್ಲಿ ಅಭಿನಂದನಾ ಸಮಿತಿ ಅಧ್ಯಕ್ಷ ರಾಜಶೇಖರ ಅಷ್ಟೂರೆ, ಪುರಸಭೆ ಉಪಾಧ್ಯಕ್ಷ ವಿಜಯಕುಮಾರ ರಾಜಭವನ, ಮಾಜಿ ಅಧ್ಯಕ್ಷ ಚಂದ್ರಕಾಂತ ಪಾಟೀಲ್, ಹಿರಿಯ ಮುಖಂಡ ಸುಭಾಷ ಕಾರಾಮುಂಗೆ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಶಂಭುಲಿಂಗ ಕಾಮಣ್ಣ, ತಾಲೂಕು ಜಾಗತಿಕ ಲಿಂಗಾಯತ ಮಹಾಸಭೆಯ ಅಧ್ಯಕ್ಷ ಬಸವರಾಜ ಮರೆ, ತಾಲೂಕು ಕಸಾಪ ಅಧ್ಯಕ್ಷ ನಾಗಭೂಷಣ ಮಾಮಡಿ ಇದ್ದರು.

ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆ ಅವರ ಅಭಿನಂದನಾ ಸಮಾರಂಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು, ಹಿತೈಷಿಗಳು ಖಂಡ್ರೆ ಅವರ ಅಭಿಮಾನಿಗಳು ಪಾಲ್ಗೊಂಡು ಯಶಸ್ಸುಗೊಳಿಸಬೇಕು. ಭಾಗವಹಿಸುವ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ.ಗುರುಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ

# ಹೈಕಮಾಂಡ್ ಕರೆದಾಗ ದೆಹಲಿಗೆ ಹೋಗುತ್ತೇನೆ: ಸಿಎಂ



**ಬೆಂಗಳೂರು, ಫೆ. 14–** ಹೈಕಮಾಂಡ್ ಕರೆದಾಗ ನಾನು ದೆಹಲಿಗೆ ಹೋಗುತ್ತೇನೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದರು.

ಹಾವೇರಿಯಲ್ಲಿಂದು ನಡೆದಿರುವ ರಾಜ್ಯ ಸರ್ಕಾರದ ಸಾವಿರ ದಿನಗಳ ಸಾರ್ಥಕ ಸಮಾವೇಶದಲ್ಲಿ ಪಾಲ್ಗೊಳ್ಳುವ ಮುನ್ನ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಪದೇ ಪದೇ ಪ್ರಶ್ನೆ ಕೇಳುವುದು ಬೇಡ ಎಂದು ಮಾಧ್ಯಮದವರಿಗೆ ಗರಂ ಆಗಿ ಹೇಳಿ, ಹೈಕಮಾಂಡ್ ಏನು ಹೇಳುತ್ತದೋ ಅದನ್ನು ನಾವು ಕೇಳುತ್ತೇವೆ ಎಂದು ಪುನರುಚ್ಚರಿಸಿದರು.

ನಾನು ಸೇರಿದಂತೆ ಪಕ್ಷದಲ್ಲಿರುವ ಎಲ್ಲರೂ ಹೈಕಮಾಂಡ್ ಮಾತನ್ನು ಕೇಳಲೇಬೇಕು ಎಂದರು.

ನೀವು ಹೈಕಮಾಂಡ್ ಎಂದು ಹೇಳುತ್ತೀರಿ. ಆದರೆ, ನಿಮ್ಮ ಪಕ್ಷದ ನಾಯಕರೇ ಶ್ರಮಕ್ಕೆ ಫಲ ಸಿಗುತ್ತದೆ ಎಂದು ಟ್ವೀಟ್ ಮಾಡುತ್ತಿದ್ದಾರೆ. ಹಾಗೆಯೇ ಕೆಲ ಶಾಸಕರು ಶಿವರಾತ್ರಿ ನಂತರ ಶುಭಸುದ್ದಿ ಎಂದು ಹೇಳುತ್ತಿದ್ದಾರಲ್ಲಾ ಎಂಬ ಪ್ರಶ್ನೆಗೆ, ಹೈಕಮಾಂಡ್‌ನವರು ಆ ರೀತಿ ಟ್ವೀಟ್ ಮಾಡಿದ್ದಾರಾ, ಹೀಗಿರುವಾಗ ಈ ರೀತಿ ಪ್ರಶ್ನೆಗಳು ಅನಗತ್ಯ ಎಂದರು.

ನಿಮ್ಮ ಪುತ್ರ ಯತೀಂದ್ರ ಸಿದ್ಧರಾಮಯ್ಯ ಅವರು ನಮ್ಮ ತಂದೆಯವರೇ ಐದು ವರ್ಷ ಸಿಎಂ ಎಂದು ಹೇಳುತ್ತಿದ್ದಾರಲ್ಲಾ ಎಂಬ ಪ್ರಶ್ನೆಗೆ ಅದಕ್ಕೆಲ್ಲಾ ನಾನು ಉತ್ತರ ಕೊಡಲ್ಲ. ಹೈಕಮಾಂಡ್‌ನವರು ಕರೆದಾಗ ನಾನು ಹೋಗುತ್ತೇನೆ. ಪದೇ ಪದೇ ಈ ಪ್ರಶ್ನೆ ಕೇಳಬೇಡಿ ಎಂದರು.ವರದಾ–ಬೇಡ್ತಿ ನದಿ ಜೋಡಣೆ ಬಗ್ಗೆ ಉತ್ತರ ಕನ್ನಡ ಜಿಲ್ಲೆಯವರು ವಿರೋಧ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈ ಪ್ರಸ್ತಾವನೆಯನ್ನು ನಾವು ಕೇಂದ್ರಕ್ಕೆ ಕಳುಹಿಸಿದ್ದೇವೆ. ಕೇಂದ್ರದವರು ಯಾವುದರ ಮೇಲೂ ನಿರ್ಣಯ ಕೊಡುತ್ತಿಲ್ಲ. ಹಾಗಾಗಿ ನಮಗೆ ಕೇಂದ್ರದ ಮೇಲೆ ಭರವಸೆಯೇ ಹೋಗಿದೆ ಎಂದರು.

**ಈ ತಿಂಗಳಲ್ಲಿ ಜಾತಿಗಣತಿ ವರದಿ–**ಕಳೆದ ಎರಡು ತಿಂಗಳ ಹಿಂದೆ ನಡೆದ ಸಾಮಾಜಿಕ ಹಾಗೂ ಶೈಕ್ಷಣಿಕ ವರದಿಯನ್ನು ಈ ತಿಂಗಳಲ್ಲೇ ಹಿಂದುಳಿದ ವರ್ಗಗಳ ಶಾಶಾತ್ವ ಆಯೋಗ ಸರ್ಕಾರಕ್ಕೆ ಸಲ್ಲಿಸಲಿದೆ ಎಂದು ಅವರು ಹೇಳಿದರು.

ರಾಜ್ಯದ ಕಾಂಗ್ರೆಸ್ ಸರ್ಕಾರದ ಸಾರ್ಥಕ ಸಮಾವೇಶವನ್ನು ಬಿಜೆಪಿಯವರು ಟೀಕಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಏನು ಮಾಡಲಿಲ್ಲ. ಹಾಗಾಗಿ ಹೊಟ್ಟೆಕಿಚ್ಚಿನಿಂದ ಟೀಕೆಗಳನ್ನು ಮಾಡುತ್ತಿದ್ದಾರೆ. ಅವರ ಆರೋಪಗಳು ಸುಳ್ಳು ಎಂದರು.

ನಾವು ಈ ಹಿಂದೆ ಅಧಿಕಾರದಲ್ಲಿದ್ದಾಗ ಜನರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸಿದ್ದೇವೆ. ಈಗಲೂ ನುಡಿದಂತೆ ನಡೆಯುತ್ತಿದ್ದೇವೆ. ಅದೇ ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಅವರು ಕೊಟ್ಟ ಭರವಸೆಯಲ್ಲಿ ಶೇ. 10 ರಷ್ಟು ಭರವಸೆಯನ್ನು ಈಡೇರಿಸರಿಲಿಲ ಹಾಗಾಗಿ ಅವರಿಗೆ ನಮ್ಮನ್ನು ಟೀಕಿಸುವ ನೈತಿಕತೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದರು.

ಬಡವರು, ದಲಿತರು, ಹಿಂದುಳಿದವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರನ್ನಾಗಿಸಲು ನಾವು ಯೋಜನೆಗಳನ್ನು ಜಾರಿ ಮಾಡಿದ್ದೇವೆ. ಅದರಂತೆ ಸಾರ್ಥಕ ಸಮಾವೇಶವನ್ನು ಆಯೋಜಿಸಿದ್ದೇವೆ. ಇಲ್ಲಿಯವರೆಗೂ ಮಾತು ಕೊಟ್ಟಂತೆ ನಡೆದುಕೊಂಡಿದ್ದವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜವಳಿ, ಸಕ್ಕರೆ, ಎಪಿಸಿ ಎಂಸಿ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ್, ಕಾನೂನು ಸಚಿವ ಹೆಚ್.ಕೆ.ಪಾಟೀಲ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ವಿಧಾನಪರಿಷತ್‌ನ ಮುಖ್ಯ ಸಚೇತಕ ಸಲೀಂ ಅಹಮದ್ ಸೇರಿದಂತೆ ಹಲವು ಶಾಸಕರು, ಸಂಸದರು ಉಪಸ್ಥಿತರಿದ್ದರು.

# ಫೆ.16ಕ್ಕೆ ಕಸಾಪ ಆಜೀವ ಸದಸ್ಯರ ಸಭೆ: ಶರಣಬಸವ ನೀರಮಾನ್ವಿ

ಯುವಮಾರ್ಗ ಸುದ್ದಿ



**ಮಾನ್ವಿ.ಫೆ.14–** ಫೆ.28 ರಂದು ನೀರಮಾನ್ವಿ ಗ್ರಾಮದ ಸಿದ್ಧಾರೂಢ ಮಠದ ಆವರಣದಲ್ಲಿ 11ನೇ ಮಾನ್ವಿ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲು ಈಚೆಗೆ ನಡೆದ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಕಾರಣ

ಫೆ.16 (ಸೋಮವಾರ) ಬೆಳಿಗ್ಗೆ10ಗಂಟೆಗೆ ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ತಾಲ್ಲೂಕಿನ ಕಸಾಪ ಆಜೀವ ಸದಸ್ಯರ ಸಭೆಯನ್ನು ಕರೆಯಲಾಗಿದೆ. ಈ ಸಭೆಯಲ್ಲಿ ಎಲ್ಲಾ ಸದಸ್ಯರು , ಕನ್ನಡಪರ ಸಂಘಟನೆಗಳ ಮುಖಂಡರು ಮತ್ತು ಸಂಘ ಸಂಸ್ಥೆಗಳ ಪ್ರಮುಖರು ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಬೇಕು ಎಂದು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶರಣಬಸವ ನೀರಮಾನ್ವಿ ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

# ಪಾಲಿಶ್ ನೆಪದಲ್ಲಿ ಐದು ತೊಲೆ ಚಿನ್ನ ದೋಚಿಕೆ: ಕಳ್ಳರ ಚಾಕಚಕ್ಯತೆ

ಯುವಮಾರ್ಗ ಸುದ್ದಿ

**ಲಿಂಗಸುಗೂರು,ಫೆ..14–** ಪಟ್ಟಣದ ಎಸ್ ಬಿಎಚ್ ಕಾಲೊನಿಯಲ್ಲಿ ಶುಕ್ರವಾರ ನಡೆದ ಘಟನೆ ಸಾರ್ವಜನಿಕರಲ್ಲಿ ಆತಂಕ ಹುಟ್ಟಿಸಿದೆ. ಉಚಿತವಾಗಿ ಚಿನ್ನಾಭರಣ ಪಾಲಿಶ್ ಮಾಡಿಕೊಡುವುದಾಗಿ ನಂಬಿಸಿ ಇಬ್ಬರು ಅಪರಿಚಿತರು ಮಹಿಳೆಯೊಬ್ಬರ ಬಳಿಯಿದ್ದ ಸುಮಾರು ಐದು ತೊಲೆ ತೂಕದ ನಾಲ್ಕು ಚಿನ್ನದ ಬಳೆಗಳನ್ನು ಕಳವು ಮಾಡಿರುವ ಘಟನೆ ಬೆಳಕಿಗೆ ಬಂದಿದೆ.

ಆಶಾದೇವಿ ಎಂಬ ಮಹಿಳೆ ತಮ್ಮ ಮನೆಯಲ್ಲಿ ಇದ್ದ ವೇಳೆ ಇಬ್ಬರು ವ್ಯಕ್ತಿಗಳು ಮನೆಗೆ ಬಂದು ಚಿನ್ನಾಭರಣವನ್ನು ಉಚಿತವಾಗಿ ಸ್ವಚ್ಛಗೊಳಿಸಿ ಹೊಸದಾಗಿ ಮಿನುಗುವಂತೆ ಮಾಡಿಕೊಡುವುದಾಗಿ ತಿಳಿಸಿದರು. ಅವರ ಮಾತಿಗೆ ನಂಬಿಕೆ ಇಟ್ಟ ಮಹಿಳೆ ಕೈಯಲ್ಲಿದ್ದ ನಾಲ್ಕು ಚಿನ್ನದ ಬಳೆಗಳನ್ನು ಪಾಲಿಶ್ ಮಾಡಲು ನೀಡಿದರು.ಮನೆಯಲ್ಲೇ ಪಾತ್ರೆಯಲ್ಲಿ ನೀರು ಕಾಯಿಸಿ, ಗ್ಯಾಸ್ ಒಲೆಯ ಮೇಲೆ ಬಳೆಗಳನ್ನು ಹಾಕಿ 15 ನಿಮಿಷಗಳಲ್ಲಿ ಸ್ವಚ್ಛಗೊಳಿಸುತ್ತೇವೆ ಎಂದು ಹೇಳಿ ಮಹಿಳೆಯ ಗಮನವನ್ನು ಬೇರೆಡೆ ಸೆಳೆದರು. ಈ ವೇಳೆ ಕುಶಲತೆಯಿಂದ ಚಿನ್ನದ ಬಳೆಗಳನ್ನು ತೆಗೆದುಕೊಂಡು ಸ್ಥಳದಿಂದ ಪರಾರಿಯಾದರು ಎನ್ನಲಾಗಿದೆ.ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು, ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವಾ ಸಂಸ್ಥಾನ್ ವತಿಯಿಂದ 12 ಜ್ಯೋತಿರ್ಲಿಂಗಗಳ ದಿವ್ಯ ದರ್ಶನ



ಯುವಮಾರ್ಗ ಸುದ್ದಿ

**ಮಾನ್ವಿ.ಫೆ.14–** ಪಟ್ಟಣದ ಈಶ್ವರ ದೇವಸ್ಥಾನದ ಹತ್ತಿರದ ಬಯಲು ಜಾಗದಲ್ಲಿ ಶಿವರಾತ್ರಿ ಅಂಗವಾಗಿ ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವಾ ಸಂಸ್ಥಾನ್ ಮಾನ್ವಿ ಶಾಖೆಯಿಂದ ಅಯೋಜಿಸಲಾದ ಸನಾತನ ಭಾರತದ ಪುರಾಣ ಪ್ರಸಿದ್ಧ 12 ಜ್ಯೋತಿರ್ಲಿಂಗಗಳ ದಿವ್ಯ ದರ್ಶನವನ್ನು ಉಮಳಿ ಹೊಸೂರು ಕಿಡಿಗಣ್ಣಯ್ಯ ಸ್ವಾಮಿಗಳು ಧರ್ಮ ಧ್ವಜಾರೋ ಹಣವನ್ನು ನೇರವೇರಿಸುವ ಮೂಲಕ ಚಾಲನೆ ನೀಡಿ ಮಾತನಾಡಿ ಶಿವರಾತ್ರಿ ಹಿಂದೂಗಳಿಗೆ ಅತ್ಯಂತ ಪವಿತ್ರವಾದ ದಿನವಾಗಿದ್ದು ಶಿವರಾತ್ರಿ ಯಂದು ಉಪವಾಸದಿಂದ ಜಾಗರಣೆಯನ್ನು ಆಚರಿಸಿದಲ್ಲಿ ಶಿವನ ಕೃಪೆಯನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಅದ್ದರಿಂದ ಪ್ರತಿಯೊಬ್ಬರು ಶಿವರಾತ್ರಿ ದಿನ ಶಿವನನ್ನು ಭಕ್ತಿ ಭಾವದಿಂದ ಪೂಜಿಸುವಂತೆ ತಿಳಿಸಿದರು.

ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವಾ ಸಂಸ್ಥಾನ್ ಮಾನ್ವಿ ಶಾಖೆಯ ಸಂಚಾಲಕರಾದ ಅಕ್ಕಮಕ್ಕ ಮಾತನಾಡಿ ಪವಿತ್ರವಾದ ಶಿವರಾತ್ರಿಯಂದು ದೇಶದ 12 ಕ್ಷೇತ್ರಗಳಲ್ಲಿ ಶಿವನು ಸ್ವಯಂಭುವಾಗಿ ನೆಲೆಸಿ ಭಕ್ತರಿಗೆ ದರ್ಶನವನ್ನು ನೀಡುತ್ತಿರುವ ಭಾರತದ ಪುರಾಣ ಪ್ರಸಿದ್ಧ 12 ಜ್ಯೋತಿರ್ಲಿಂಗಗಳ ದಿವ್ಯ ದರ್ಶನವನ್ನು ಭಕ್ತರಿಗೆ ಮಾಡಿಸುವ ಉದ್ದೇಶದಿಂದ 12 ಜ್ಯೋತಿರ್ಲಿಂಗಗಳ ಪ್ರತಿರೂಪಗಳನ್ನು ಭಕ್ತರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವಾ ಸಂಸ್ಥಾನ್ ಶಿಖಾರಿಪುರ ಶಾಖೆಯ ಸಂಚಾಲಕರಾದ ಮಂಜುನಾಥ, ಮಾನ್ವಿಯ ಎಂ.ಎಂ. ಹಿರೇಮಠ ಸೇರಿದಂತೆ ಪರಿವಾರದ ಸದಸ್ಯರು ಭಾಗವಹಿಸಿದರು.

# ಸಿರವಾರ: ಪಟ್ಟಣದ ಶ್ರೀ ಮಹಾಮುನಿ ಸ್ವಾಮಿ ಪಲ್ಲಕ್ಕಿ ಮಹೋತ್ಸವ: ಸಿದ್ದಯ್ಯ ಸ್ವಾಮಿ



**ಸಿರವಾರ,ಫೆ.14–** ಸುಕ್ಷೇತ್ರ ಶ್ರೀ ಷ.ಚ ಮಹಾಮುನಿ ಸ್ವಾಮಿ ಶ್ರೀ ಅನ್ನದಾನೇಶ್ವರ ಸ್ವಾಮಿ ಆರೂಢ ಮ್ಯಾಗಳ ಮಠದಲ್ಲಿ ಸೋಮವಾರದಿಂದ 2ದಿನಗಳವರೆಗೆ ಶಿವರಾತ್ರಿ ಅಂಗವಾಗಿ ಪಲ್ಲಕ್ಕಿ ಮಹೋತ್ಸವದೊಂದಿಗೆ ಅನೇಕ ಪೂಜಾ ಕಾರ್ಯಕ್ರಮಗಳು ಜರುಗಲಿವೆ ಎಂದು ಮಠದ ಪೂಜ್ಯರಾದ ಸಿದ್ದಯ್ಯ ಸ್ವಾಮಿ ಗುರುಗಳು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವರಾತ್ರಿ ಮಹಾ ಹಬ್ಬದ ವಿಶೇಷವಾಗಿ ಜಿಲ್ಲೆಯ ವಿವಿಧ ನಗರ, ಗ್ರಾಮಗಳಿಂದ ಮ್ಯಾಗಳ ಮಠದ ಭಕ್ತರು ಸಿರವಾರ ಪಟ್ಟಣದ ವಿದ್ಯಾನಗರದಲ್ಲಿರುವ ಶ್ರೀ ಷ.ಚ ಮಹಾಮುನಿ ಸ್ವಾಮಿ ಶ್ರೀ ಅನ್ನದಾನೇಶ್ವರ ಸ್ವಾಮಿ ಆರೂಢ ಮಠದಲ್ಲಿ ಜರುಗುವ ಪೂಜಾ ಕಾರ್ಯಕ್ರಮಗಳಾದ ನಗಾರಿ ಪೂಜೆ, ನೈವೇದ್ಯ, ಭಜನೆ ಕಾರ್ಯಕ್ರಮ ಹಾಗೂ ಮಂಗಳವಾರ ಪಲ್ಲಕ್ಕಿ ಮಹೋತ್ಸವ ಮತ್ತು ಬಸವಣ್ಣನವರ ವಚನಗಳನ್ನು ನುಡಿಯಲಾಗುವುದು, ಮತ್ತು ಧೂಳ್ಗಾಯಿ ನಂತರ ಮಧ್ಯಾಹ್ನ ಮಹಾ ಪ್ರಸಾದ. ರಾತ್ರಿ ನುಡಿಮನೆ ಪ್ರವೇಶ ಕಾರ್ಯಕ್ರಮಗಳು ನಡೆಯುವ ಕಾರಣ ಸಮಸ್ತ ಮಹಾಮುನಿ ಸ್ವಾಮಿಯ ಭಕ್ತರು ಪಲ್ಲಕ್ಕಿ ಮಹೋತ್ಸವದಲ್ಲಿ ಭಾಗವಹಿಸಿ ದೇವರ ಪ್ರೀತಿಗೆ ಪಾತ್ರರಾಗಬೇಕೆಂದುಸ್ವಾಮಿಗಳು ಸ್ವಾಗತ ಕೋರಿದರು.

ಈ ಸಂದರ್ಭದಲ್ಲಿ ಮಹಾಮುನಿ ಸ್ವಾಮಿ ಮ್ಯಾಗಳ ಮಠದ ಸ್ವಾಮಿಗಳಾದ ಆನಂದ ಸ್ವಾಮಿ, ಅಯ್ಯಣ್ಣ ಸ್ವಾಮಿ, ಮುದ್ದಯ್ಯ ಸ್ವಾಮಿ, ಚನ್ನಬಸವ ಸ್ವಾಮಿಗಳ ನೇತೃತ್ವದಲ್ಲಿ ಪಲ್ಲಕ್ಕಿ ಮಹೋತ್ಸವ ಕಾರ್ಯಕ್ರಮ ಜರುಗಿಸಲಾಗುವುದು.

# ವಿಮುಕ್ತಿ ದೇವದಾಸಿ ತಾಯಂದಿರ ಕಲ್ಯಾಣಕ್ಕಾಗಿ ನಮ್ಮ ಸರ್ಕಾರ ಸದಾ ಸಿದ್ದ ಜಿ ಎಸ್ ಮಂಜುನಾಥ


ಯುವಮಾರ್ಗ ಸುದ್ದಿ





**ರಾಯಚೂರು,ಫೆ.14–** ಖಾಸಗಿ ಸಂತೋಷ ಹೋಟೆಲ್ ನಲ್ಲಿ ಜಿಲ್ಲಾ ಮಾದಿಗ ಸಮಾಜ ವತಿಯಿಂದ ಅಭಿನಂದನ ಸಮಾರಭ ಕಾರ್ಯಕ್ರಮದಲ್ಲಿ ಡಾ!! ಬಿರ್ ಅಂಬೇಡ್ಕರ್ ಜಗಜೀವನ್ ರಾಮ್ ಮತ್ತು ಶಿವಶರಣ ಮಾದರ ಚೆನ್ನಯ್ಯ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದ ಕರ್ನಾಟಕ ಆದಿಜಾಂಭವ ಅಭಿವೃದ್ಧಿ ನಿಗಮದ ಅದ್ಯಕ್ಷರು ಜಿ ಎಸ್ ಮಂಜು ನಾಥ ರವರು ಮಾತನಾಡಿ ರಾಯಚೂರು ಜಿಲ್ಲೆಗೆ ಭೂ ಒಡೆತನ ಯೋಜನೆ ಅಡಿಯಲ್ಲಿ ಯುಮುಕ್ತಿ

ದೇವದಾಸಿ ತಾಯಂದಿರಿಗೆ ನನ್ನ ಅಧ್ಯಕ್ಷರ ಅವಧಿಯಲ್ಲಿ ಸುಮಾರು 198 ಕುಟುಂಬಗಳಿಗೆ ತಲಾ ಒಂದು ಎಕರೆ ಯಂತೆ ಜಮೀನಿಯನ್ನು ನೊಂದಣಿ ಮಾಡಿಸಿ ಜಮೀನನ್ನು ಹಂಚಿಕೆ ಮಾಡಿಕೊಟ್ಟಿರುತ್ತೇವೆ ನಮ್ಮ ಕಾಂಗ್ರೆಸ್ ಸರ್ಕಾರದ ಸನ್ಮಾನ್ಯ ಶ್ರೀ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ರವರು ಜೊತೆ ಚರ್ಚೆ ಮಾಡಿ ಇನ್ನು 1800 ದೇವದಾಸಿ ಕುಟುಂಬಗಳಿಗೆ ಜಮೀನು ಮಂಜೂರು ಅನುದಾನ ಬಿಡುಗಡೆ ಮಾಡಬೇಕೆಂದು ನಾನು ಮನವಿಯನ್ನು ಮಾಡಿದ್ದೇನೆ, ಸಿ ಎಂ ಸಿದ್ದರಾಮಯ್ಯ ನವರು ಕೂಡ ಅದಕ್ಕೆ ಒಪ್ಪಿಗೆಯನ್ನು ಸೂಚಿಸಿದ್ದಾರೆ ಸಿರುವಾರ ತಾಲೂಕಿನ ಗ್ರಾಮಗಳಲ್ಲಿ ದೇವದಾಸಿ ತಾಯಂದಿರಿಗೆ ಹಂಚಿಕೆ ಮಾಡಿದ ಭೂಮಿಯನ್ನು ವೀಕ್ಷಣೆ ಮಾಡಿದಾಗ ಫಲವತ್ತವಾದ ಸಿಕ್ಕಿದೆ ಎಂದು ಬಹಳ ಸಂತೋ ಷವಾಯಿತು. ವಸತಿ ಮತ್ತು ಇನ್ನಿತರ ಯೋಜನ 'ಗಳನ್ನು ನಮ್ಮ ಆದಿ ಜಾಂಬವ ಅಭಿವೃದ್ಧಿ ನಿಗಮದ ವತಿಯಿಂದ ಹಂಚಿಕೆ ಮಾಡಲು ನಾವು ಪಣತೊ ಡುತ್ತೇವೆ ಎಂದು ಹೇಳಿದರು. ನಿರ್ದೇಶಕರು ವ್ಯವಸ್ಥಾಪಕರು ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ ಬೆಂಗಳೂರು ಮಾತನಾಡಿ ದೇವದಾಸಿ ತಾಯಂದಿರಿಗೆ ಇನ್ನು ಹೆಚ್ಚಿನ ರೀತಿಯಲ್ಲಿ ಯೋಜನೆಗಳು ಕೊಡುವ ಮೂಲಕ ನಮ್ಮ ಸಮಾಜದ ಬಂಧುಗಳಿಗೆ ನಾವು ಒಂದು ಚಿಕ್ಕ ಪ್ರಯತ್ನ ಮಾಡಬೇಕಾಗಿದೆ ಹಾಗೆ ಮಾತನಾಡುತ್ತಾ ಮಾದಿಗ ಸಮಾಜದ ಯುವಕರು ತಮ್ಮ ಕೆಲಸದಲ್ಲಿ ಹೊಡೆದುಕೊಳ್ಳಬೇಕು ಮತ್ತು ಗುತ್ತಿಗೆದಾರರಾಗಿ ಮುಂದೆ ಬರಬೇಕು ಏಕೆಂದರೆ ಸರಕಾರ ಈಗಾಗಲೇ ಪರಿಶಿಷ್ಟ ಜಾತಿ ಜನಾಂಗಕ್ಕೆ ಇಂತಿಷ್ಟು ಪರ್ಸೆಂಟೇಜ್ ಎಂದು ಕಾಮಗಾರಿಯನ್ನು ನೀಡಲಾಗಿದೆ ಹುದ್ದೆ ಉದ್ಯೋಗದಲ್ಲಿ ಮೀಸಲಾತಿ ಪಡೆದುಕೊಳ್ಳಬೇಕೆಂದು ಅವರು ಸಲಹೆ ನೀಡಿದರು ಈ ಸಂದರ್ಭದಲ್ಲಿ ಜಿಲ್ಲಾ ವ್ಯವಸ್ಥಾಪಕರಾದ ರಾಜೇಂದ್ರ ಜಲ್ದಾರ್ ಪಿ ಯಲ್ಲಪ್ಪ ಮಾಜಿ ನಗರ ಸಭೆ ಸದಸ್ಯರು.ಜೆ ಅಬ್ರಹಾಂ ಹೋನಟಿಗಿ ಬಸವರಾಜ ನಕ್ಕುಂದಿ ಮುದಿಕಪ್ಪ ಮರಕಮದಿನ್ನಿ ಹಾಗೂ ದೇವದಾಸಿ ಮಹಿಳೆಯರ ಸಮಾಜದ ಹಿರಿಯ ಮುಖಂಡರು ಸಂಘಟನೆ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಮಾನ್ಯ ಜಿಲ್ಲಾಧಿಕಾರಿಗಳು ಅಧ್ಯಕ್ಷತೆಯಲ್ಲಿ ಯುಮಿಕ್ತಿ ದೇವದಾಸಿ ಮಹಿಳೆಯರಿಗೆ 198 ಕುಟುಂಬಗಳಿಗೆ ಭೂಮಿ ಮಂಜೂರು ಮಾಡಿ ನೊಂದಣಿ ಮಾಡಿ ಮಾಡಿಸಿಕೊಡಲಾಗಿದೆ

ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು ಕೂಡ ದೇವದಾಸಿ ಮಹಿಳೆಯರಿಗೆ ಸಂಪೂರ್ಣವಾಗಿ ಜಿಲ್ಲಾ ಅನುಷ್ಠಾನ ಸಮಿತಿಯಲ್ಲಿ ಒಪ್ಪಿಗೆ ನೀಡಿದ್ದಾರೆ

**–ರಾಜೇಂದ್ರ ಜಾಲ್ದರ್ ಜಿಲ್ಲಾ ವ್ಯವಸ್ಥಾಪಕರು ರಾಯಚೂರು**



ಜಿ ಎಸ್ ಮಂಜುನಾಥ ಅಧ್ಯಕ್ಷರು ಹಾಗೂ ನಿರ್ದೇಶಕ ವ್ಯವಸ್ಥಾಪಕರವರು

ಮಾದಿಗ ಸಮಾಜದ ವಿಮುಕ್ತಿ ದೇವದಾಸಿ ತಾಯಂದಿರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಭೂಮಿಯನ್ನು ಹಂಚಿಕೆ ಮಾಡಬೇಕು ವಸತಿ ಸೌಲಭ್ಯಗಳು ಹಾಗೂ ಇನ್ನೂ ಹೆಚ್ಚಿನ ಅನುದಾನವನ್ನು ನಿಡಿ ದೇವದಾಸಿ ಮಹಿಳೆಯರಿಗೆ ಯೋಜನೆಗಳನ್ನು ರೂಪಿಸಬೇಕು

**–ಬಸವರಾಜ ನಕ್ಕುಂದಿ**

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H